# ALL NATIONS GOSPEL PUBLISHERS



Copyright ANGP

www.angp-hb.co.za

info@angp.co.za

*KANNADA / KANARESE Heart Book*

# ಮಾನವನ ಹೃದಯ

Copyright ANGP

**COPYRIGHT**
**ISBN 0 - 908367 - 10 - 4**

**E-MAIL: info@angp.co.za**

**ALL NATIONS GOSPEL PUBLISHERS**
**P.O. Box 2191, PRETORIA, 0001, R.S.A.**
(A Gospel Literature Mission financed by donations)
(Reg. No. 1961/001798/08)

# ಮುನ್ನುಡಿ

ಈ ಪುಸ್ತಕದ ಚಿತ್ರಗಳು ಮತ್ತು ಸಂದೇಶವು 1732ನೇ ಇಸವಿಯಲ್ಲಿ ಫ್ರಾನ್ಸ್ ದೇಶದಲ್ಲಿ ಪ್ರಕಟಿಸಲ್ಪಟ್ಟಿತು. ಮೊದಲಾಗಿ "ಆತ್ಮೀಕ ಹೃದಯದರ್ಪಣ" ಎಂಬ ಹೆಸರನ್ನು ಇದಕ್ಕೆ ಕೊಡಲಾಗಿತ್ತು. ಇದರಲ್ಲಿ ಪ್ರಕಟವಾಗಿರುವ ಅಗಾಧವಾದ ಸತ್ಯಾಂಶಗಳ ದೆಸೆಯಿಂದಾಗಿ, ಈ ಪುಸ್ತಕವು ಈಗಲೂ ಅನೇಕಾನೇಕ ಭಾಷೆಗಳಲ್ಲಿ ಪ್ರಕಟವಾಗುತ್ತಲಿದೆ ಮತ್ತು ಇದರ ಸಂದೇಶವನ್ನು ಎಲ್ಲಾ ವರ್ಗದ ಜನರೂ ಓದಿ ಆತ್ಮೀಕ ಆಶೀರ್ವಾದವನ್ನು ಹೊಂದುತ್ತಲಿದ್ದಾರೆ.

ದೇವರು ಅನ್ನುವುದೇನೆಂದರೆ, "ನಾನು ನಿಮಗೆ ಹೊಸ ಮನಸ್ಸನ್ನು ಕೊಟ್ಟು ನಿಮ್ಮಲ್ಲಿ ನೂತನ ಸ್ವಭಾವವನ್ನು ಹುಟ್ಟಿಸುವೆನು; ಕಲ್ಲಾದ ಹೃದಯವನ್ನು ನಿಮ್ಮೊಳಗಿಂದ ತೆಗೆದು ಮೃದುವಾದ ಹೃದಯವನ್ನು ನಿಮಗೆ ದಯಪಾಲಿಸುವೆನು."

—*J. R. Gschwend*

* * *

ಈ ಪುಸ್ತಕದ ಸಂದೇಶವು ನಿಮಗೆ ಆಶೀರ್ವಾದವನ್ನುಂಟುಮಾಡಲೆಂಬ ಪ್ರಾರ್ಥನೆಯಿಂದ ಇದನ್ನು ಪ್ರಕಟಿಸಿ ಹಂಚಿರುತ್ತದೆ. ಈ ಪುಸ್ತಕವನ್ನು ಓದುವುದರಿಂದಾಗಿ, ಯೇಸುಕ್ರಿಸ್ತನ ಮೂಲಕವಾದ ರಕ್ಷಣೆಯ ನಿಶ್ಚಯತ್ವವು ನಿಮಗೆ ದೊರೆತಿರುವುದಾದರೆ, ಪ್ರಕಾಶಕರಿಗೆ ಆ ವಿಷಯವಾಗಿ ಬರೆದುಕೊಂಡಲ್ಲಿ ಅವರು ನಿಮ್ಮೊಡನೆ ಸಂತೋಷಿಸಿ ನಿಮಗೋಸ್ಕರವಾಗಿ ಪ್ರಾರ್ಥಿಸಲು ಇಚ್ಛೆಸುತ್ತಾರೆ.

– ಎಚ್. ಬಿ. ಪಿ. ಸೈಮನ್ಸ್

* * *

Copyright ANGP

# ಮಾನವನ ಹೃದಯ

"ಪಾಪ ಮಾಡುವ ಪ್ರತಿಯೊಬ್ಬನು ಅಧರ್ಮವನ್ನು ಮಾಡುವವನಾಗಿದ್ದಾನೆ. ಏಕೆಂದರೆ, ಪಾಪವು ಅಧರ್ಮವೇ.

ನಮ್ಮ ಪಾಪಗಳನ್ನು ಹೋಗಲಾಡಿಸುವುದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನೆಂದು ನಿಮಗೆ ಗೊತ್ತಾಗಿದೆ. ಆತನಲ್ಲಿ ಪಾಪವಿಲ್ಲ.

ಆತನಲ್ಲಿ ನೆಲೆಗೊಳ್ಳದಿರುವವನು ಆತನನ್ನು ಕಂಡವನೂ ಅಲ್ಲ, ತಿಳಿದವನೂ ಅಲ್ಲ.

ಪ್ರಿಯರಾದವರೇ, ನಿಮ್ಮನ್ನು ಸನ್ಮಾರ್ಗದಿಂದ ತಪ್ಪಿಸುವುದಕ್ಕೆ ಯಾರಿಗೂ ಅವಕಾಶ ಕೊಡಬೇಡಿರಿ. ಕ್ರಿಸ್ತನು ಹೇಗೆ ನೀತಿವಂತನಾಗಿದ್ದಾನೋ ಹಾಗೆಯೇ ನೀತಿಯನ್ನನುಸರಿಸುವವನು ನೀತಿವಂತನಾಗಿದ್ದಾನೆ.

ಪಾಪ ಮಾಡುವವನು ಸೈತಾನದಿಂದ ಹುಟ್ಟಿದವನಾಗಿದ್ದಾನೆ. ಆದಿಯಿಂದಲೂ ಸೈತಾನನು ಪಾಪಮಾಡುವವನಾಗಿದ್ದಾನಲ್ಲಾ. ಸೈತಾನನ ಕೆಲಸಗಳನ್ನು ಲಯಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು.

ದೇವರಿಂದ ಹುಟ್ಟಿದವನು ಪಾಪಮಾಡನು. ಯಾಕೆಂದರೆ ದೇವರ ಜೀವವು ಆತನಲ್ಲಿ ನೆಲೆಗೊಂಡದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು.

ಇವರು ದೇವರ ಮಕ್ಕಳೆಂದು, ಅವರು ಸೈತಾನನ ಮಕ್ಕಳೆಂದು ಇದರಿಂದ ವ್ಯಕ್ತವಾಗುತ್ತದೆ. ನೀತಿಯನ್ನು ಅನುಸರಿಸದವನೂ ತನ್ನ ಸಹೋದರನನ್ನು ಪ್ರೀತಿಸದವನೂ ದೇವರಿಂದ ಹುಟ್ಟಿದವರಲ್ಲ."

ನೀನು ಈ ಪುಸ್ತಕವನ್ನು ಓದುತ್ತಾ ಮುಂದುವರಿದಂತೆ, ಇದು ನಿನ್ನ ನಿಜ ಸ್ಥಿತಿಯನ್ನು ತೋರಿಸುವ ದರ್ಪಣದಂತೆ ಇದೆ ಎಂಬುದನ್ನು ಮನಸ್ಸಿನಲ್ಲಿರಿಸು. ನೀನೊಬ್ಬ ಕ್ರೈಸ್ತನಾಗಿರಬಹುದು, ಅಕ್ರೈಸ್ತನಾಗಿರಬಹುದು, ಕ್ರೈಸ್ತವಿಶ್ವಾಸಿಯಾಗಿಲ್ಲದೆ ಇರಬಹುದು, ಅಥವಾ ನಿಜವಿಶ್ವಾಸದಿಂದ ಹಿಂಜರಿದು ಹೋದವನಾಗಿರಬಹುದು. ಯಾವ ಸ್ಥಿತಿಯಲ್ಲಿ ಇದ್ದರೂ, ದೇವರ ದೃಷ್ಟಿಯಲ್ಲಿ ನೀನು ಹೇಗಿರುವಿಯೋ ಹಾಗೆಯೇ ನಿನ್ನನ್ನು ಕಂಡುಕೊಳ್ಳುವಿ: "ದೇವರು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ." (1 ಸಮುವೇಲ: 16:7) ದೇವರು ಮುಖದಾಕ್ಷಿಣ್ಯ ಮಾಡುವವನಲ್ಲ.

ಸೈತಾನನು ಎಲ್ಲಾ ಸುಳ್ಳುಗಾರರಿಗೂ ಮೂಲ ತಂದೆಯಾಗಿದ್ದಾನೆ. ಆತನು ಅಂಧಕಾರದ ಅಧಿಪತಿಯೂ ಇಹಲೋಕದ ದೇವರೂ ಆಗಿದ್ದು ಮನುಷ್ಯರನ್ನು ಮೋಸಗೊಳಿಸುವುದಕ್ಕಾಗಿ ಪ್ರಕಾಶವುಳ್ಳ ದೇವದೂತನ ವೇಷವನ್ನೂ ಧರಿಸುತ್ತಾನೆ. ಹಿಂದಿನ ದಿನಗಳಲ್ಲಿ ಇದ್ದಂತೆಯೇ ಈಗಲೂ ಕ್ರಿಸ್ತನ ಅಪೋಸ್ತಲರೆಂದು ನಟಿಸುವ ಅನೇಕ ಸುಳ್ಳು

Copyright ANGP

ಅಪೋಸ್ತಲರೂ, ಮೋಸಗೊಳಿಸುವ ಸೇವಕರೂ ಇರುತ್ತಾರೆ. ಸೈತಾನನು ಸಹಾ ಬೆಳಕಿನ ದೂತನಂತೆ ವೇಷಹಾಕಿಕೊಳ್ಳುವಾಗ (2 ಕೊರಿಂಥ. 11:13–14) ಇವರು ಈ ರೀತಿ ಮಾಡುವದೇನೂ ವಿಶೇಷವಲ್ಲ. ದೇವರು ನಮ್ಮನ್ನು ಪ್ರೀತಿಸುತ್ತಾನೆ, ಮತ್ತು ನಮ್ಮನ್ನು ರಕ್ಷಿಸುವುದಕ್ಕಾಗಿ ಯೇಸುಕ್ರಿಸ್ತನು ತನ್ನ ಪ್ರಾಣಾರ್ಪಣೆ ಮಾಡಿದ್ದಾನೆ – ಎಂಬಿತ್ಯಾದಿ ವಿಷಯಗಳನ್ನು ಗ್ರಹಿಸಿಕೊಳ್ಳಲು ಅಸಮರ್ಥರಾಗುವಂತೆ, ಇಹಲೋಕಾಧಿಪತಿಯಾದ ಸೈತಾನನು ಮನುಷ್ಯರ ಮನಸ್ಸನ್ನೂ ಕಣ್ಣುಗಳನ್ನೂ ಕುರುಡುಮಾಡುತ್ತಾನೆ. ಎಲ್ಲಾ ಪಾಪಿಗಳೂ, ಅವಿಶ್ವಾಸಿಗಳೂ ದೇವರ ದೃಷ್ಟಿಯಲ್ಲಿ ಕುರುಡರೂ, ಜೀವವಿಲ್ಲದವರೂ ಆಗಿದ್ದಾರೆ. ಅವರು ಇಹಲೋಕಾಧಿಪತಿಯ ಆಡಳಿತಕ್ಕೊಳಪಟ್ಟಿದ್ದಾರೆ. (ಎಫೆಸ 2:2) ಯಾವದಾದರೊಂದು ರೀತಿಯಿಂದ, ತಮ್ಮ ನಿರ್ಗತಿಕ ಸ್ಥಿತಿಯ ಕಡೆಗೆ ಅವರ ಕಣ್ಣುಗಳು ತೆರೆಯಲ್ಪಡದಿದ್ದಲ್ಲಿ, ಅವರು ನಿತ್ಯನಾಶನದ ಕಡೆಗೆ ಮುಂದುವರಿಯುತ್ತಾ ಸಾಗುವರು. "ನನ್ನಲ್ಲಿ ಪಾಪವಿಲ್ಲ" ಅನ್ನುವವನು ತನ್ನನ್ನು ತಾನೇ ಮೋಸಗೊಳಿಸುತ್ತಾನೆ. "ಸೈತಾನನ ಕಾರ್ಯಗಳನ್ನು ಲಯಮಾಡುವುದಕ್ಕಾಗಿಯೇ ದೇವಕುಮಾರನು ಪ್ರತ್ಯಕ್ಷನಾದನು." (ಯೋಹಾನ 3:8.) "ಹೀಗಿರುವುದರಿಂದ ದೇವರಿಗೆ ಒಳಗಾಗಿರಿ. ಸೈತಾನನನ್ನು ಎದುರಿಸಿರಿ. ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು. ದೇವರ ಸಮೀಪಕ್ಕೆ ಬನ್ನಿರಿ. ಆಗ ಆತನು ನಿಮ್ಮ ಸಮೀಪಕ್ಕೆ ಬರುವನು." (ಯಾಕೋಬ: 4:8–9)

ನೀನು ಈ ಪುಸ್ತಕವನ್ನು ಓದುತ್ತಾ, ಇದರಲ್ಲಿ ಇರುವ ಚಿತ್ರಗಳನ್ನು ಗಮನಿಸುತ್ತಾ ಮುಂದುವರಿದಂತೆ, ನಿನ್ನ ಹೃದಯದ ನಿಜಸ್ಥಿತಿಯನ್ನು ಕಂಡುಕೊಳ್ಳಲು ಶಕ್ತನಾಗುವಿ. ನಿನ್ನ ಹೃದಯದ ನಿಜಸ್ಥಿತಿಯನ್ನು ತೋರಿಸಿಕೊಡಲು ದೇವರ ಶುಭ್ರವಾದ ಬೆಳಕು ನಿನ್ನ ಹೃದಯದೊಳಗೆ ಬರುವಂತೆ ತೆರೆದು ಕೊಡು. ನಿನ್ನಲ್ಲಿ ಪಾಪವಿಲ್ಲವೆಂದು ಸಾಧಿಸಲು ಪ್ರಯತ್ನಿಸದೆ, ನಿನ್ನ ಪಾಪಗಳನ್ನು ಒಪ್ಪಿಕೋ. ಏಕೆಂದರೆ "ನಾವು ಪಾಪ ಮಾಡಲಿಲ್ಲವೆಂದು ಹೇಳಿದರೆ, ನಮ್ಮನ್ನು ನಾವೇ ಮೋಸ ಪಡಿಸಿಕೊಳ್ಳುತ್ತೇವೆ. ಮತ್ತು ಸತ್ಯವೆಂಬುದು ನಮ್ಮಲ್ಲಿಲ್ಲ. ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ, ಆತನು ನಂಬಿಗಸ್ತನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು."(1 ಯೋಹಾನ 8–10) "ದೇವರ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ." – ಎಂದು ದೇವರ ವಾಕ್ಯವು ತಿಳಿಸುತ್ತದೆ.

ಈಗ ನೀನು ದೇವರ ಅಧಿಕಾರಕ್ಕೆ, ಇಲ್ಲವಾದರೆ ಸೈತಾನನ ಅಧಿಕಾರಕ್ಕೆ ಒಳಪಟ್ಟಿರುತ್ತೀ. ನೀನು ಪಾಪಕ್ಕೆ ದಾಸನಾಗಿರುತ್ತಿ, ಇಲ್ಲವಾದರೆ, ದೇವರ ಸೇವಕನಾಗಿರುತ್ತಿ. ನಿನ್ನ ನಿಜಸ್ಥಿತಿಯನ್ನು ಅಲ್ಲಗಳೆಯಬೇಡ. ಅದರ ಬದಲಾಗಿ ದೇವರ ಸಹಾಯಕ್ಕಾಗಿ ಬೇಡಿಕೋ. ಆಗ, ನಮ್ಮ ಮೇಲೆ ಪ್ರವರ್ತಿಸುವ ಸೈತಾನನ ಮತ್ತು ಪಾಪದ ಬಲವನ್ನು ಮುರಿದು

Copyright ANCP

ಪಾಪಿಗಳನ್ನು ರಕ್ಷಿಸಲು ಈ ಲೋಕಕ್ಕೆ ಬಂದ ಯೇಸುಕ್ರಿಸ್ತನ ಮುಖಾಂತರ, ದೇವರು ತಾನೇ, ನಿನ್ನನ್ನು ಬಿಡುಗಡೆಗೊಳಿಸುವನು. ನಮ್ಮ ಬಿಡುಗಡೆಯು ಆತನಲ್ಲಿದೆ. ನಿನ್ನ ಜೀವನದ ಎಲ್ಲಾ ರಹಸ್ಯಗಳನ್ನೂ, ಗುಪ್ತ ಆಲೋಚನೆ, ಕಾರ್ಯಗಳನ್ನೂ ವಿವೇಚಿಸಿ ತಿಳಿದುಕೊಳ್ಳುವ ದೇವರ ಸನ್ನಿಧಿಯಲ್ಲಿ ನೀನು ಇರುತ್ತೀ. ನಿನ್ನನ್ನೂ ನಿನ್ನ ಕಾರ್ಯಗಳನ್ನೂ ಆತನಿಂದ ಮರೆಯಾಗಿರಿಸಲು ನಿನಗೆ ಸಾಧ್ಯವಿಲ್ಲ. ಏಕೆಂದರೆ "ಕಿವಿಯನ್ನು ದಯಪಾಲಿಸಿದಾತನು ಕೇಳನೋ? ಕಣ್ಣು ಕೊಟ್ಟವನು ನೋಡನೋ?"

"ದೇವರು ಲೋಕದ ಎಲ್ಲಾ ಕಡೆಗಳಲ್ಲಿಯೂ ದೃಷ್ಟಿಯನ್ನು ಪ್ರಸರಿಸುತ್ತಾ ತನ್ನ ಕಡೆಗೆ ಯಥಾರ್ಥ ಮನಸ್ಸುಳ್ಳವರ ರಕ್ಷಣೆಗಾಗಿ ತನ್ನ ಪ್ರತಾಪವನ್ನು ತೋರ್ಪಡಿಸುತ್ತಾನೆ." (2 ಪೂರ್ವ: 16:9)

"ಆತನು ಮನುಷ್ಯರ ಮಾರ್ಗಗಳ ಮೇಲೆ ಕಣ್ಣಿಟ್ಟು ಅವನ ಹೆಜ್ಜೆಗಳನ್ನೆಲ್ಲಾ ನೋಡುವನು. ಅಧರ್ಮಿಗಳು ಅಡಗಿಕೊಳ್ಳುವುದಕ್ಕೆ ಅನುಕೂಲವಾದ ಯಾವ ಕತ್ತಲೂ ಯಾವ ಮರಣದ ನೆರಳೂ ಇರುವುದಿಲ್ಲ." (ಯೋಬ: 34:21–22)


"ಆದರೆ ಯೇಸು ಎಲ್ಲವನ್ನೂ ಬಲ್ಲವನಾದ್ದರಿಂದ ಅವರಿಗೆ ವಶವಾಗಲಿಲ್ಲ" (ಯೋಹಾನ 2:24). ಆದುದರಿಂದ "ಯಾವನ ದ್ರೋಹವು ಪರಿಹಾರವಾಗಿದೆಯೋ, ಯಾವನ ಪಾಪವು ಕ್ಷಮಿಸಲ್ಪಟ್ಟಿದೆಯೋ ಅವನೇ ಧನ್ಯನು. ಕರ್ತನು ಯಾವನ ಲೆಕ್ಕಕ್ಕೆ ಅಪರಾಧವನ್ನು ಎಣಿಸುವುದಿಲ್ಲವೋ ಅವನೇ ಧನ್ಯನು. ಯಾವನ ಹೃದಯದಲ್ಲಿ ಕಪಟವಿರುವುದಿಲ್ಲವೋ ಅವನು ಧನ್ಯನು" (ಕೀರ್ತನೆ 32:1-2, ಕೀರ್ತನೆ: 51 ಓದಿರಿ). "ಎಲ್ಲೈ ಕಷ್ಟಪಡುವವರೇ, ಹೊರೆ ಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿ ಕೊಡುವೆನು" (ಮತ್ತಾಯ 11:28-30) ಎಂದು ಯೇಸು ಕ್ರಿಸ್ತನು ಈ ದಿನವೂ ನಿನ್ನನ್ನು ಕರೆಯುತ್ತಾನೆ.

ಇಹಲೋಕ ಭಾವದಿಂದ ತುಂಬಿರುವ, ಆತ್ಮೀಯ ಪುನರ್ಜನ್ಮವನ್ನು ಹೊಂದಿರುವ ಒಬ್ಬ ಸ್ತ್ರೀ ಇಲ್ಲವೇ ಪುರುಷನ ಹೃದಯದ ಸ್ಥಿತಿಯನ್ನು ಈ ಚಿತ್ರದಲ್ಲಿ ಚಿತ್ರಿಸಲಾಗಿದೆ. ಸತ್ಯವೇದವು ಇಂಥಾ ವ್ಯಕ್ತಿಯನ್ನು ಒಬ್ಬ "ಪಾಪಿ" ಎಂದೂ, ಇಹಲೋಕಾಧಿಪತಿಯ (ಪಿಶಾಚನ) ಮತ್ತು ಶರೀರಭಾವದ ದುರಾಶೆ, ದುರ್ಮೋಹಗಳ ಆಳ್ವಿಕೆಗೆ ಒಳಪಟ್ಟ ಮನುಷ್ಯನು ಎಂದೂ ವರ್ಣಿಸುತ್ತದೆ. ದೇವರ ದೃಷ್ಟಿಯಲ್ಲಿ ನಮ್ಮ ಹೃದಯದ ನಿಜ ಸ್ಥಿತಿಯನ್ನು ಇದು ಸೂಚಿಸುತ್ತದೆ. ಈ ಮನುಷ್ಯನ ಕಣ್ಣುಗಳು ಕಾಂತಿಹೀನವಾಗಿ ಕೆಂಪೇರಿರುತ್ತದೆ. ಇದು ಜ್ಞಾನೋಕ್ತಿ: 23:29-33ರಲ್ಲಿ ವಿವರಿಸಿರುವ ಕುಡುಕತನವನ್ನು ಸೂಚಿಸುತ್ತದೆ. "ಅಯ್ಯಯ್ಯೋ ಅನ್ನುವವರು ಯಾರು? ಅಕಟಾ ಎಂದು ಕೂಗಿಕೊಳ್ಳುವವರು ಯಾರು? ಯಾರು ಜಗಳವಾಡುತ್ತಾರೆ? ಯಾರು ಗೋಳಾಡುತ್ತಾರೆ? ಯಾರು ಸುಮ್ಮನೆ ಗಾಯಪಡುತ್ತಾರೆ? ಕೆಂಪೇರಿದ ಕಣ್ಣುಳ್ಳವರು ಯಾರು? ಮಿಶ್ರಮದ್ಯಪಾನಾಸಕ್ತರಾಗಿ

Copyright ANCP

ದ್ರಾಕ್ಷಾರಸವನ್ನು ಕುಡಿಯುವವರೇ. ಪಾತ್ರೆಯಲ್ಲಿ ಕೆಂಪಗೆ ಥಳಥಳಿಸುವ ದ್ರಾಕ್ಷಾರಸದ ಮೇಲೆ ಕಣ್ಣಿಡಬೇಡ. ಅದು ಗಂಟಲಿನೊಳಗೆ ಮೆಲ್ಲನೆ ಇಳಿದು ಹೋಗಿ ಆ ಮೇಲೆ ಹಾವಿನಂತೆ ಕಚ್ಚುತ್ತದೆ. ಹೌದು, ನಾಗರಹಾವಿನ ಹಾಗೆ ಕಡಿಯುತ್ತದೆ. ನಿನ್ನ ಕಣ್ಣುಗಳು ಪರಸ್ತ್ರೀಯರನ್ನೇ ನೋಡುವುದು. ನಿನ್ನ ಹೃದಯವು ವಿಪರೀತವಾದ ಮಾತುಗಳನ್ನೇ ಆಡುವುದು".

## ಚಿತ್ರಗಳ ವಿವರಣೆ




ಮೊದಲನೆಯ ಚಿತ್ರವು

ಈ ಚಿತ್ರದಲ್ಲಿರುವ ತಲೆಯ ಕೆಳಗೆ ಮಾನವನ ಹೃದಯವು ಚಿತ್ರಿಸಲ್ಪಟ್ಟಿದೆ. ನಮ್ಮ ಹೃದಯವು ನಮ್ಮ ಎಲ್ಲಾ ಅಪರಾಧಗಳ ಕೇಂದ್ರವೂ ನೆಲೆಬೀಡೂ ಆಗಿರುವುದರಿಂದ, ಆ ಪಾಪಗಳನ್ನು ಸೂಚಿಸುವ ಪ್ರಾಣಿಗಳು ಆ ಹೃದಯದಲ್ಲಿ ವಾಸಿಸುತ್ತಿರುವಂತೆ ಚಿತ್ರಿಸಲ್ಪಟ್ಟಿದೆ. ಹೃದಯದ ನಿಜಸ್ಥಿತಿಯನ್ನು ಪ್ರವಾದಿಯಾದ ಯೆರೆಮೀಯನ ಬಾಯಿಯ ಮೂಲಕ ದೇವರು ಈ ರೀತಿ ತಿಳಿಸಿರುತ್ತಾನೆ– "ಹೃದಯವು ಎಲ್ಲಕ್ಕಿಂತಲೂ ವಂಚಕ, ಗುಣವಾಗದ ರೋಗಕ್ಕೆ ಒಳಗಾಗಿದೆ, ಇದನ್ನು ಯಾರು ತಿಳಿದಾರು? (ಯೆರೆಮೀಯ; 17:9). "ಮನುಷ್ಯನೊಳಗಿಂದ ಹೊರಡುವಂಥದೇ ಮನುಷ್ಯನನ್ನುಹೊಲೆ ಮಾಡುವುದು. ಒಳಗಿನಿಂದ ಅಂದರೆ ಮನುಷ್ಯರ ಮನಸ್ಸಿನೊಳಗಿನಿಂದ ಸೂಳೆಗಾರಿಕೆ, ಕಳ್ಳತನ, ಕೊಲೆ, ಹಾದರ, ದ್ರವ್ಯಾಶೆ, ಕೆಡುಕುತನ, ಮೋಸ, ಬಂಡತನ, ಹೊಟ್ಟೇಕಿಚ್ಚು, ಬೈಗಳು, ಸೊಕ್ಕು, ಬುದ್ಧಿಗೇಡಿತನ ಇವೇ ಮೊದಲಾದುವುಗಳ ಕೆಟ್ಟ ವಿಷಯಗಳೆಲ್ಲಾ ಒಳಗಿನಿಂದ ಹೊರಟು ಮನುಷ್ಯನನ್ನು ಹೊಲೆ ಮಾಡುತ್ತವೆ" (ಮಾರ್ಕ: 7:21-23)ಎಂದು ಯೇಸುಕ್ರಿಸ್ತನು ಹೇಳಿದ್ದಾನೆ.

1. ನವಿಲು: ನವಿಲಿನ ಸೌಂದರ್ಯವು ಎಲ್ಲರ ಮೆಚ್ಚುಗೆಯನ್ನು ಸಂಪಾದಿಸಿರುತ್ತದೆ. ಆದರೆ, ಮನುಷ್ಯನ ಹೃದಯದಲ್ಲಿ ಅದು 'ಹೆಮ್ಮೆ' ಎಂಬ ಪಾಪವನ್ನು ಸೂಚಿಸುತ್ತದೆ. ಒಂದು ಕಾಲದಲ್ಲಿ, ಪ್ರತಿಷ್ಠೆ ಹೊಂದಿದ ಕೆರೂಬಿಯಾಗಿದ್ದ ದೇವರ ಪ್ರತಿಭೆಯಿಂದ ಶೋಭಿಸುತ್ತಿದ್ದ ದೇವದೂತನಾದ ಲೂಸಿಫರನು ಸಹಾ ತನ್ನ ಹೆಮ್ಮೆಯಿಂದಾಗಿ ದೊಬ್ಬಲ್ಪಟ್ಟು, ದೇವವೈರಿಯಾದ ಪಿಶಾಚನಾದನು. (ಯೆಶಾಯ: 14:9-17, ಯೆಹೆಜ್ಕೇಲ: 28:12-17)

ಈ ಹೆಮ್ಮೆಯು ನರಕದ ಅಗಾಧದಿಂದ ಜನಿಸಿ, ಅನೇಕ ರೂಪಗಳಲ್ಲಿ ಪ್ರಕಟವಾಗುತ್ತದೆ. ಕೆಲವರು ತಮ್ಮ ಐಶ್ವರ್ಯದಲ್ಲಿ, ಕೆಲವರು ತಮ್ಮ ವಿದ್ಯೆ ಬುದ್ಧಿಯಲ್ಲಿ ಹೆಚ್ಚಳಪಡುತ್ತಾರೆ. ಕೆಲವರು, ತಮ್ಮ ದೇಹಗಳನ್ನು ನಾಚಿಕೆಗೆಟ್ಟ ರೀತಿಯಲ್ಲಿ ಬಯಲುಗೊಳಿಸುವ ಆಧುನಿಕ ರೀತಿಯ ಉಡಿಗೆತೊಡಿಗೆಗಳಲ್ಲಿ ಹೆಚ್ಚಳಪಡುತ್ತಾರೆ. ಇನ್ನು ಕೆಲವರು ಬೆಳೆಬಾಳುವ ಉಂಗುರ, ಚಿನ್ನದ ಆಭರಣಗಳನು ಧರಿಸುವುದರಲ್ಲಿ ಹೆಚ್ಚಳಪಡುತ್ತಾರೆ. ಇಂಥವರ ವಿಷಯವಾಗಿ ಯೆಶಾಯ 3:17-24ರಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ.

ಕೆಲವರು ತಮ್ಮ ಪೂರ್ವಜರು, ಮಾತೃಭೂಮಿ, ಸಂಸ್ಕೃತಿ, ಸಾಹಸ ಮೊದಲಾದುವುಗಳಲ್ಲಿ ಹೆಚ್ಚಳಪಡುತ್ತಾರೆ. ಆದರೆ, "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ; ದೀನರಿಗಾದರೂ ಕರುಣೆ ತೋರುತ್ತಾನೆ." (1 ಪೇತ್ರ:-15:5) "ದೇವರು ಗರ್ವ, ಅಹಂಕಾರಗಳನ್ನು ಹಗೆ ಮಾಡುತ್ತಾನೆ." (ಜ್ಞಾನೋಕ್ತಿ 8:13) ಗರ್ವದ ಹಿಂದೆ ನಾಶನವೂ, ಹೆಮ್ಮೆಯ ಹಿಂದೆ ಬೀಳುವಿಕೆಯೂ ಇದೆ (ಜ್ಞಾನೋಕ್ತಿ 16:18) ಎಂಬುದನ್ನು ಅವರು ಮರೆಯುತ್ತಾರೆ.

2. ಹೋತವು ಶರೀರದ ದುರಾಶೆಗಳನ್ನೂ, ಬಂಡುತನ (immorality) ಜಾರತ್ವ, ವ್ಯಭಿಚಾರಗಳನ್ನು ಸೂಚಿಸುತ್ತದೆ. ಆಧುನಿಕ ಯುಗದ ಈ ದಿನಗಳಲ್ಲಿ ಈ ಪಾಪಗಳು ಬಹಳ

Copyright ANGP

ಹೆಚ್ಚಿರುತ್ತವೆ. ಆದುದರಿಂದ "ಕಡೇ ದಿನಗಳು ಸೋದೋಮ್ ದಿನಗಳಂತಿರುತ್ತವೆ" ಎಂದು ಸುಮಾರು 2,000 ವರ್ಷಗಳ ಹಿಂದೆಯೇ ಯೇಸುಸ್ವಾಮಿಯು ಮುಂತಿಳಿಸಿದ ಮಾತಿನ ಸತ್ಯಾಂಶವನ್ನು ಈ ದಿನಗಳಲ್ಲಿ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಈ ಆಧುನಿಕ ದಿನಗಳಲ್ಲಿ ಅನೇಕ ಸ್ತ್ರೀ-ಪುರುಷರನ್ನು ಈ ದುರಾತ್ಮವು ವಶಪಡಿಸಿಕೊಂಡಿರುವುದಲ್ಲದೆ, ಅನೇಕ ಧಾರ್ಮಿಕ ವ್ಯಕ್ತಿಗಳ ಮನೆಗಳನ್ನೂ, ಸಂಸ್ಥೆಗಳನ್ನೂ, ಶಾಲೆ, ಹಾಸ್ಟೆಲ್ ಮುಂತಾದವು ಗಳನ್ನೂ ಆವರಿಸಿರುವುದು. ಇಷ್ಟೇ ಅಲ್ಲದೆ, ನಾಶಕರವಾದ ಈ ದುಷ್ಟತನದ ಬೀಜವು ಮನರಂಜನೆ, ಅಶ್ಲೀಲ ಸಾಹಿತ್ಯ ಮುಂತಾದ ಅನೇಕ ವಿಧಾನಗಳಲ್ಲಿ ಮನುಷ್ಯನ ಹೃದಯ ದಲ್ಲಿ ಆಳವಾಗಿ ಬಿತ್ತಲ್ಪಡುತ್ತದೆ. ಇದರ ಫಲವಾಗಿ, ಪವಿತ್ರನಾದ ದೇವರು ಸ್ಪಷ್ಟವಾಗಿ ಪಾಪ ಎಂದು ಕರೆಯುವಂತ ಅನೇಕ ವಿಷಯಗಳು, ಈ ದಿನಗಳಲ್ಲಿ ಸಂಸ್ಕೃತಿ, ಶೀಲ ಎಂದು ಪರಿಗಣಿಸಲ್ಪಟ್ಟಿರುತ್ತದೆ. ಮಿಲಿಯಾಂತರ ಯೌವನಸ್ಥರು, ವಿವಿಧ ರೀತಿಯಿಂದ ತಮ್ಮ ಜೀವಿತವನ್ನು ರೂಪಿಸಲು ಬೇಕಾದ ಆದರ್ಶ ಮಾದರಿಯನ್ನು ಪಡೆದು ಮುಂದುವರಿದು, ಕೊನೆಗೆ ಅನೇಕ ನಾಚಿಕೆ, ತೊಂದರೆಗಳಲ್ಲಿ ಬೀಳುತ್ತಾರೆ. ಶೀಲಗೆಟ್ಟ ಹಾಗೂ ಅನೈತಿಕ ವ್ಯಾಪಾರಗಳಲ್ಲಿ ಮಗ್ನರಾದ ಅನೇಕರು ಯೌವನ ಜನಾಂಗದ ಆದರ್ಶ ವ್ಯಕ್ತಿಗಳಾಗು ತ್ತಾರೆ. ಅನೇಕ ವೇಳೆ ನೃತ್ಯಮಂದಿರಗಳು ಕೂಡಾ ಈ ಅನೈತಿಕ ಭಾವವನ್ನು ಬೆಳೆಸುವ ಸ್ಥಳ ಗಳಾಗಿರುತ್ತವೆ. ದೇವರ ಪವಿತ್ರ ದೃಷ್ಟಿಯಲ್ಲಿ ಶೀಲವಂತರಾಗಿದ್ದ ಯೋಸೆಫ ಮತ್ತು ಇನ್ನಿತರ ವ್ಯಕ್ತಿಗಳನ್ನು ಆದರ್ಶ ವ್ಯಕ್ತಿಗಳನ್ನಾಗಿ ತೆಗೆದುಕೊಳ್ಳುವುದಿಲ್ಲ. ಯಾವ ಸಂಸ್ಕೃ ತಿಯೂ ಇಲ್ಲದ "ಜೂಲು" ಎಂಬುದಾಗಿ ಕರೆಯಲ್ಪಡುವ ಜನರಾದರೂ ವ್ಯಭಿಚಾರದಲ್ಲಿ ಬಿದ್ದ ಸ್ತ್ರೀ ಪುರುಷರನ್ನು ಮರಣದಂಡನೆಗೆ ಒಳಪಡಿಸುವರು. ಇಂಥಾ ಹಿಂದುಳಿದ ಜನಾಂಗವು ಆಧುನಿಕ ಜನಾಂಗಕ್ಕೆ ಬೋಧಿಸುವ ಯೋಗ್ಯತೆಯನ್ನು ಪಡೆದಿರುತ್ತದೆ. ಅಲ್ಲದೆ ವಿಚಾರಣೆಯ ಸಮಯದಲ್ಲಿ ಎದ್ದು ನಿಂತು ಈ ಆಧುನಿಕ ಜನಾಂಗವನ್ನು ದ್ರೋಹಿಗಳೆಂದು ಖಂಡಿಸುವರು. "ಜಾರರ ಸಹವಾಸವನ್ನು ಮಾಡದೆ, ಜಾರತ್ವಕ್ಕೆ ದೂರವಾಗಿ ಓಡಿಹೋಗಿರಿ" ಎಂದು ದೇವರು ತಿಳಿಸುತ್ತಾನೆ. "ಮನುಷ್ಯರು ಮಾಡುವ ಇತರ ಪಾಪಕೃತ್ಯಗಳು ದೇಹಕ್ಕೆ ಹೊರಗಾಗಿದೆ. ಆದರೆ ಜಾರತ್ವವನ್ನು ಮಾಡುವವನು ತನ್ನ ದೇಹಕ್ಕೆ ಹಾನಿಕರವಾದ ಪಾಪವನ್ನು ಮಾಡುತ್ತಾನೆ. ದೇವರಿಂದ ದೊರಕಿ ನಿಮ್ಮೊ ಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಯೆಂದು ನಿಮಗೆ ತಿಳಿಯದೋ? ನೀವು ನಿಮ್ಮ ಸ್ವಂತ ಸೊತ್ತಲ್ಲ." (1 ಕೊರಿಂತ. 6:18-19) "ಯಾವನಾದರೂ (ಅಥವಾ ಯಾವಳಾದರೂ) ದೇವರ ಆಲಯವನ್ನು ಕೆಡಿಸಿದರೆ, ದೇವರು ಅವನನ್ನು (ಯಾ ಅವಳನ್ನು) ನಾಶಮಾಡುವನು. ಏಕೆಂದರೆ ದೇವರ ಆಲಯವು ಪವಿತ್ರವಾದದ್ದು. ಆ ಆಲಯವು ನೀವೇ." (1 ಕೊರಿಂತ್ಯ 3:17.)

3. ಹಂದಿಯು ಹೊಟ್ಟೆಬಾಕತನವನ್ನೂ, ಕಂಡಿದು ಅಮಲೇರುವ ಸ್ವಭಾವ

Copyright ANCP

ವನ್ನೂ ಸೂಚಿಸುತ್ತದೆ. ಇದು ತನ್ನ ಹಾದಿಯಲ್ಲಿ ಸಿಕ್ಕುವ ವಸ್ತುಗಳನ್ನು ಶುದ್ಧಾಶುದ್ಧತೆಯ ವಿವೇಚನೆ ಇಲ್ಲದೆ ತಿನ್ನುತ್ತಾ ಹೋಗುವ ಒಂದು ಹೊಲಸು ಪ್ರಾಣಿಯಾಗಿದೆ. ಇದೇ ರೀತಿ, ಪಾಪಮಯ ಹೃದಯವು ಎಲ್ಲಾ ಅಶುದ್ಧ ಆಲೋಚನೆ, ಅಶುದ್ಧ ಬಂಡು ಮಾತು, ಹೇಯವಾದ ಚಿತ್ರಗಳನ್ನೂ ಹೇಯವಾದ ಪುಸ್ತಕ ಮುಂತಾದವುಗಳನ್ನೂ ಸೇವಿಸುತ್ತದೆ. ದೇವರ ಪವಿತ್ರ ಮಂದಿರವಾಗುವುದಕ್ಕೆ ಕರೆಯಲ್ಪಟ್ಟ, ಈ ನಮ್ಮ ಶರೀರವು ಧೂಮಪಾನ, ಹೊಗೆಸೊಪ್ಪು, ಅಫೀಮು ಮುಂತಾದ ಹಾನಿಕರ ವಸ್ತುಗಳ ಚಟಗಳಿಂದ ಕೆಡಿಸಲ್ಪಡುತ್ತದೆ. ತಂಬಾಕು ಹಾಗೂ ಅಫೀಮಿನ ಸೇವನೆಯು ಹಿಂದೆಂದೂ ಇರದ ರೀತಿಯಲ್ಲಿ ಈ ಕಾಲದಲ್ಲಿ ಮನುಷ್ಯರನ್ನು ಹಿಡಿದಿರುತ್ತದೆ. ಈ ರೀತಿ ಹೊಗೆಸೊಪ್ಪಿನ ಚಟಕ್ಕೂ ಪಿಶಾಚನಿಗೂ ದಾಸರಾದ ಮನುಷ್ಯರನ್ನು ಬಿಡುಗಡೆಗೊಳಿಸಲು ದೇವರ ಬಲಕ್ಕಲ್ಲದೆ ಬೇರಾವುದಕ್ಕೂ ಸಾಧ್ಯವಿಲ್ಲ. ಧೂಮಪಾನದ (ಹೊಗೆಸೊಪ್ಪಿನ) ಮೂಲಕ ದೇವಾಲಯದ ಪವಿತ್ರತೆಯು ಕೆಡುವುದೆಂದು ತಿಳಿದು, ಧಾರ್ಮಿಕ ಶ್ರದ್ಧೆಯುಳ್ಳ ಯಾವ ಸಾಮಾನ್ಯ ವ್ಯಕ್ತಿಯೂ, ದೇವಾಲಯದೊಳಗೆ ಧೂಮಪಾನ ಮಾಡಲು ಧೈರ್ಯಗೊಳ್ಳುವುದಿಲ್ಲ. ಆದರೆ ಈ ವಿಷಕಾರಿ ಎಲೆಯ ಸೇವನೆಯಿಂದ ದೇವರ ಆಲಯವಾದ ತಮ್ಮ ದೇಹಗಳನ್ನು ತಾವು ಅಪವಿತ್ರಗೊಳಿಸುತ್ತಿದ್ದೇವೆಂದು ಅವರು ತಿಳಿದುಕೊಂಡಿರುವುದಿಲ್ಲ. ಆದುದರಿಂದ ಅಪೊಸ್ತಲನಾದ ಪೌಲನು "ನಿಮ್ಮ ದೇಹವು ಪವಿತ್ರಾತ್ಮನ ಗರ್ಭಗುಡಿಯಾಗಿದೆ ಎಂದು ನಿಮಗೆ ತಿಳಿಯದೆ? ಯಾವನಾದರೂ (ಅಥವಾ ಯಾವಳಾದರೂ), ಈ ಆಲಯವನ್ನು ಕೆಡಿಸಿದರೆ, ದೇವರು ಆತನನ್ನು ನಾಶ ಮಾಡುವನು" (1 ಕೊರಿಂತ್ಯ 3:16, 17, 6:18-19) ಎಂದು ಹೇಳುತ್ತಾನೆ.

ಹೊಟ್ಟೆಬಾಕನು ದೇವರ ದೃಷ್ಟಿಯಲ್ಲಿ ಆತನ ಕೋಪ, ತಿರಸ್ಕಾರಗಳಿಗೆ ಪಾತ್ರನಾದ ವ್ಯಕ್ತಿಯಾಗಿದ್ದಾನೆ. ನಾವು ಜೀವಿಸುವುದಕ್ಕಾಗಿ ತಿನ್ನುತ್ತೇವೆಯೇ ಹೊರತು ತಿನ್ನುವುದಕ್ಕಾಗಿ ಜೀವಿಸುವುದಿಲ್ಲ. ಯೋಗ್ಯ ಆಹಾರದಿಂದ ನಮ್ಮ ಹಸಿವೆಯನ್ನು ತೃಪ್ತಿಗೊಳಿಸಿ ನೀಗಿಸಲು ಸಾಧ್ಯವಿದೆ. ಆದರೆ ದುರಾಶೆಯನ್ನು ತೃಪ್ತಿಗೊಳಿಸಲು ಸಾಧ್ಯವಿಲ್ಲ. ದುರಾಶೆಯು ಯಾವಾಗಲೂ "ಕೊಡು ಕೊಡು" ಎಂದು ಕೂಗುತ್ತಿರುತ್ತದೆ.

ದುರಾಶೆಯನ್ನು ತೃಪ್ತಿಗೊಳಿಸಲು ಎಂದಿಗೂ ಸಾಧ್ಯವಿಲ್ಲ. ಹಳೆ ಒಡಂಬಡಿಕೆಯ ನಿಯಮದ ಪ್ರಕಾರ, ಹೊಟ್ಟೆಬಾಕನನ್ನೂ ಕುಡುಕನನ್ನೂ ಕಲ್ಲೆಸೆದು ಕೊಲ್ಲಬೇಕಾಗಿದ್ದಿತು. (ಧರ್ಮೋ: 21:18-21) "ಕುಡುಕನೂ ಹೊಟ್ಟೆಬಾಕನೂ ದುರ್ಗತಿಗೆ ಬರುವನು. ನಿದ್ರಾಸಕ್ತಿಯು ಹರಕು ಬಟ್ಟೆಗಳನ್ನು ಹೊದಿಸುವುದು – ಹೊಟ್ಟೆಬಾಕರ ಗೆಳೆಯನು ತಂದೆಯ ಮಾನವನ್ನು ಕಳೆಯುವನು" (ಜ್ಞಾನೋಕ್ತಿ: 23:21; 28:7) ಹೊಟ್ಟೆಬಾಕನೂ ದುರಾಶೆಗಳಿಗೆ ದಾಸನೂ ಆಗಿದ್ದ ಒಬ್ಬಾನೊಬ್ಬ ಐಶ್ವರ್ಯವಂತನ ವಿಷಯವನ್ನು ಜ್ಞಾಪಿಸಿಕೊಳ್ಳಿರಿ. ಆತನು ಸತ್ತು ನರಕಕ್ಕೆ ದೊಬ್ಬಲ್ಪಟ್ಟಾಗ, ತಾಳಲಾರದ ವೇದನೆಯಲ್ಲಿ ತನ್ನ

Copyright ANGP

ದೃಷ್ಟಿಯನ್ನು ಮೇಲಕ್ಕೆತ್ತಿದನು. ಕುಡುಕತನದಿಂದಾಗುವ ಹಾನಿಯನ್ನು ವಿವರಿಸಬೇಕಾಗಿಲ್ಲ. ಅದನ್ನು ಹಗುರಭಾವದಿಂದ ಪರಿಗಣಿಸಲೂ ಸಾಧ್ಯವಿಲ್ಲ ಎಂಬುದನ್ನು ಎಲ್ಲರೂ ಬಲ್ಲರು. ಯಾವ ಕುಡುಕನೂ ದೇವರ ರಾಜ್ಯವನ್ನು ಸೇರಲಾರನೆಂದು ದೇವರು ತನ್ನ ವಾಕ್ಯದಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಅಮಲು ಪಾನೀಯವು ಒಂದು ಆಹಾರವಲ್ಲ. ಮನುಷ್ಯನು ಗಲಿಬಿಲಿಗೊಳಗಾಗುವಂತೆ, ಆತನ ಮನಸ್ಸಿನ ಮೇಲೆ ಪ್ರವರ್ತಿಸುವ ಒಂದು ಮರಣಕರವಾದ ಪಾನೀಯವಾಗಿದೆ. ಆದುದರಿಂದ ಅಮಲುಕೋರರು ಹುಚ್ಚರಂತೆ ವರ್ತಿಸುತ್ತಾರೆ. ಅಮಲೇರಿದಾಗ, ಅವರು ಇತರ ಸಮಯದಲ್ಲಿ ಎಂದೂ ಮಾಡದ ಕೊಲೆ, ಹಾದರ ಮುಂತಾದ ಕಾರ್ಯಗಳನ್ನು ನಡೆಸುತ್ತಾರೆ. "ದ್ರಾಕ್ಷಾರಸವು ಪರಿಹಾಸ್ಯ, ಮದ್ಯವು ಕೂಗಾಟ. ಇವುಗಳಿಂದ ಓಲಾಡುವವನು ಜ್ಞಾನಿಯಲ್ಲ." (ಜ್ಞಾನೋಕ್ತಿ. 20:1)

ಅದೇ ರೀತಿ, ಈ ಅಮಲು ಪಾನೀಯವನ್ನು ತಯಾರಿಸುವವರೂ, ಮಾರುವವರೂ ದೇವರ ದೃಷ್ಟಿಯಲ್ಲಿ ಅಪರಾಧಿಗಳು. ಏಕೆಂದರೆ, ದೇವರು ತನ್ನ ವಾಕ್ಯದಲ್ಲಿ, "ಅಯ್ಯೋ. ಸುರಾಪಾನದಲ್ಲಿ ಶೂರರೂ, ಮದ್ಯ ಮಿಶ್ರಣದಲ್ಲಿ ಸಾಹಸಿಗಳೂ ಆಗಿರುವವರ ಗತಿಯನ್ನು ಏನೆಂದು ಹೇಳಲಿ!" (ಯೆಶಾಯ 5:22). "ತನ್ನ ನೆರೆಯವನ ಕೈಗೆ ಪಾನಪಾತ್ರೆಯನ್ನಿಟ್ಟು ಅವನಿಗೆ ಮದ್ಯವನ್ನು ಕೊಟ್ಟು ಅವನನ್ನು ಸಹಾ ಅಮಲೇರುವಂತೆ ಮಾಡುವವನ ಗತಿಯನ್ನು ಏನೆಂದು ಹೇಳಲಿ!" (ಹಬ.2:15). "ಕಿನ್ನರಿ, ವೀಣೆ, ದಮ್ಮಡಿ, ಕೊಳಲು, ದ್ರಾಕ್ಷಾರಸ ಇವುಗಳೇ ಅವರ ಔತಣದ ಸೊಬಗು; ದೇವರ ಕೆಲಸವನ್ನೇ ಅವರು ಲಕ್ಷಿಸರು" (ಯೆಶಾಯ 5:12). "ಮೋಸಹೋಗಬೇಡಿರಿ, ಜಾರರು ವ್ಯಭಿಚಾರಿಗಳು, ವಿಟರು, ಪುರುಷಗಾಮಿಗಳು, ಕಳ್ಳರು, ಲೋಭಿಗಳು, ಕುಡುಕರು, ಬೈಯುವವರು, ಸುಲುಕೊಳ್ಳುವವರು, ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲ" (1 ಕೊರಿಂತ್ಯ 6:9-10) ಎಂದು ದೇವರು ತಿಳಿಸಿರುತ್ತಾನೆ.

ನಮ್ಮ ಇಹಲೋಕ ಸಂಬಂಧವಾದ ಸ್ವಭಾವದಿಂದ ಹುಟ್ಟಿಬರುವ ಪಾಪಗಳು ಯಾವವೆಂದು ನಮಗೆ ಸ್ಪಷ್ಟವಾಗಿ ತಿಳಿದಿದೆ. ಅದರಲ್ಲಿ ಜಾರತ್ವ, ಅಶುದ್ಧತೆ, ಅಸಭ್ಯತೆ, ವಿಗ್ರಹಾರಾಧನೆ, ಮಾಟ, ಜಗಳ, ಹಗೆತನ, ಮತ್ಸರ, ದುರಾಶೆಗಳ ಅತಿರೇಕತೆ, ವೈಶಮ್ಯ ಮುಂತಾದುವುಗಳು ಸೇರಿವೆ. ಇಂಥ ವಿಷಯಗಳಲ್ಲಿ ಸೇರಿರುವವರಿಗೆ ದೇವರ ರಾಜ್ಯದಲ್ಲಿ ಪ್ರವೇಶವಿಲ್ಲ (ಗಲಾತ್ಯ. 5:19-21). "ಮದ್ಯಪಾನ ಮಾಡಿ ಮತ್ತರಾಗಬೇಡಿರಿ. ಆದರೆ ಪವಿತ್ರಾತ್ಮಭರಿತರಾಗಿರಿ" (ಎಫೆಸ. 5:18).

ಬಾಯಾರಿದ ಜನರನ್ನುದ್ದೇಶಿಸಿ ಯೇಸುಸ್ವಾಮಿಯು "ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಜೀವದ ನೀರನ್ನು ಧಾರಾಳವಾಗಿ ಕುಡಿಯಲಿ" (ಯೋಹಾನ. 37-38)ಎಂದು ಕರೆಯುತ್ತಾನೆ. "ಎಲೈ ಬಾಯಾರಿದ ಸಕಲ ಜನರೇ ನೀರಿನ ಬಳಿಗೆ ಬನ್ನಿರಿ. ಹಣವಿಲ್ಲದವನು ಸಹಾ ಬರಲಿ! ಬನ್ನಿರಿ ಕೊಂಡುಕೊಳ್ಳಿರಿ, ಉಣ್ಣಿರಿ.

Copyright ANCP

ಬಂದು ದ್ರಾಕ್ಷಾರಸವನ್ನೂ ಹಾಲನ್ನೂ ಹಣಕೊಡದೆ ಕ್ರಯವಿಲ್ಲದೆ ತೆಗೆದುಕೊಳ್ಳಿರಿ" (ಯೆಶಾಯ: 50:1). "ನಾನು ಕೊಡುವ ನೀರನ್ನು ಕುಡಿದವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ. ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯಜೀವವನ್ನುಂಟುಮಾಡುವುದು" (ಯೋಹಾನ 4:14) ಎಂದು ಆತನು ಅಂದಿರುತ್ತಾನೆ.

4. ಆಮೆಯು ಉದಾಸೀನತೆ ಮೈಗಳ್ಳತನ ಮತ್ತು ಮಾಟಮಂತ್ರಗಳನ್ನು ಸೂಚಿಸುತ್ತದೆ. ಅಪನಂಬಿಕೆಯು ಮಾಟಮಂತ್ರಗಳಿಗೆ ಸಮಾನವಾದ ಪಾಪವಾಗಿದೆ. "ಸೋಮಾರಿಯ ಆಶೆಯು ಅವನನ್ನು ಕೊಲ್ಲುವುದು. ಅವನ ಕೈಗಳು ದುಡಿಯಲೊಲ್ಲವಷ್ಟೆ. ಅವನು ದಿನವೆಲ್ಲಾ ಆಶಿಸುತ್ತಲೇ ಇರುವನು" (ಜ್ಞಾನೋ.21:25. 26). "ವಾಗ್ದಾನ ಮಾಡಲ್ಪಟ್ಟ ದೇಶವನ್ನು ಸ್ವಾಧೀನ ಮಾಡುವುದರಲ್ಲಿ ತಡಮಾಡಬೇಡಿರಿ" ಎಂದು ಯೆಹೋವನು (ದೇವರು) ಇಸ್ರಾಯೇಲ್ಯರನ್ನು ಎಚ್ಚರಿಸಿದನು. ಆದರೆ ದೈವೀಕ ವಿಷಯಗಳನ್ನು ಹುಡುಕಿ ಕಂಡುಕೊಳ್ಳುವ ವಿಷಯದಲ್ಲಿ ಮನುಷ್ಯಸ್ವಭಾವವು ಬಹಳ ಮೈಗಳ್ಳತನ, ಉದಾಸೀನತೆಯಿಂದ ಕೂಡಿದ್ದಾಗಿದೆ. "ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗುವುದಕ್ಕೆ ಹೆಣಗಾಡಿರಿ" (ಲೂಕ 13:24). "ಹುಡುಕುವವನು ಕಂಡುಕೊಳ್ಳುವನು." "ಪರಲೋಕ ರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ. ಬಲಾತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನ ಮಾಡಿಕೊಳ್ಳುತ್ತಾರೆ" (ಮತ್ತಾಯ 11:12) ಎಂದು ಯೇಸು ಸ್ವಾಮಿಯು ಹೇಳುತ್ತಾನೆ.

ನಮ್ಮ ಆತ್ಮರಕ್ಷಣೆ ಹಾಗೂ ಆತ್ಮೀಕ ಬೆಳವಣಿಗೆಗಳ ವಿಷಯಗಳಲ್ಲಿ ಮೈಗಳ್ಳತನವು ಇರುವುದಾದರೆ ಅದು ನಮ್ಮನ್ನು ನಾಶನಕ್ಕೆ ನಡಿಸುತ್ತದೆ. ಆ ಮೈಗಳ್ಳತನವು ನಮ್ಮನ್ನು ಪ್ರಾರ್ಥನೆಯಿಂದ, ದೈವೀಕ ರಹಸ್ಯಗಳನ್ನು ಹುಡುಕುವ ಪ್ರಯತ್ನದಿಂದ, ಮಾತ್ರವಲ್ಲದೆ ದೇವರು ಮಾಡಿದ ಐಶ್ವರ್ಯವಾದ ವಾಗ್ದಾನಗಳನ್ನು ನಮ್ಮದಾಗಿ ಮಾಡಿಕೊಳ್ಳುವುದರಿಂದಲೂ ದೂರವಾಗಿರಿಸಿ ನಾಶನಕ್ಕೆ ನಡಿಸುತ್ತದೆ. ದೇವರು ನಿನ್ನ ಹೃದಯದಲ್ಲಿ ಮಾತನಾಡಿ ನಿನ್ನ ಹೃದಯವನ್ನು ಆತನಿಗೆ ಈ ದಿನವೇ ಅರ್ಪಿಸುವುದಕ್ಕೆ ಒತ್ತಾಯಪಡಿಸುವಾಗ ಪಿಶಾಚನು ಬಂದು ಆ ಕಾರ್ಯವನ್ನು ನಾಳೆ ಇಲ್ಲವೇ ಮತ್ತೊಂದು ಅನುಕೂಲವಾದ ದಿನದಲ್ಲಿ ನಡೆಸುವಂತೆ ಪ್ರೇರೇಪಿಸುತ್ತಾನೆ. ಆದರೆ ಅನುಕೂಲವಾದ ಆ ದಿನವು ಬರುವುದೇ ಇಲ್ಲ. ಹೀಗಾಗಿ ನೀನು ಕ್ರಿಸ್ತನವನಲ್ಲದೆ, ರಕ್ಷಣೆ ಹೊಂದದೆ ಗತಿಸಿ ಹೋಗುವಿ. "ನೀವು ಈ ಹೊತ್ತು ದೇವರ ಶಬ್ದಕ್ಕೆ ಕಿವಿಗೊಟ್ಟರೆ ನಿಮ್ಮ ಹೃದಯಗಳನ್ನು ಕಠಿಣ ಮಾಡಿಕೊಳ್ಳಬೇಡಿರಿ" (ಇಬ್ರಿಯ. 3:7-8). ಈ ರೀತಿ 'ಅನುಕೂಲ ಸಮಯ ಬಂದಾಗ' ಎಂದು ಹೇಳಿ ರಕ್ಷಣೆಯನ್ನು ಸ್ವೀಕರಿಸುವ ದಿನವನ್ನು ಒಂದಕ್ಕೆ ಹಾಕಿ ಎಷ್ಟೋ ಜನರು ನಾಶವಾಗಿ ಹೋಗಿರುತ್ತಾರೆ. ನಾಳೆ ಎಂಬ ದಿನವು ನಮ್ಮದಲ್ಲ.

ಆಮೆಯ ಚಿಪ್ಪನ್ನು ಮಾಟ ವೈದ್ಯರು ತಮ್ಮ ಮಾಟವಿದ್ಯೆಯನ್ನು ಅಭ್ಯಾಸಿಸಲು ಉಪಯೋಗಿಸುತ್ತಾರೆ. ಹೀಗಾಗಿ ಆಮೆಯು ದೇವರ ಮೇಲೆ ಭರವಸ ಇಡುವುದರ

Copyright ANGP

ಬದಲು ಮಾಟ ಮಂತ್ರಗಳಲ್ಲಿ ಭರವಸೆಯಿಡುವುದನ್ನೂ ಅದನ್ನು ಅಭ್ಯಾಸಿಸುವುದನ್ನೂ, ಕಣಿ ಹೇಳುವುದು, ಮಂತ್ರ ತಂತ್ರ ಮುಂತಾದುವುಗಳನ್ನೂ ಸೂಚಿಸುತ್ತದೆ. ವಿಶೇಷವಾಗಿ ಪರಿಶೋಧನೆಯ ಕಾಲದಲ್ಲಿ ಅಸ್ವಸ್ಥ, ಗಂಡಾಂತರ ವಿಯೋಗ, ದುಃಖ ಮುಂತಾದ ಕಷ್ಟ ಕಾಲಗಳಲ್ಲಿ ನಾವು ನಮ್ಮ ಅದೃಷ್ಟ ಇಲ್ಲವೇ ದುರಾದೃಷ್ಟಗಳ ಮೇಲೆ ಭರವಸೆಯಿಡದೆ ಸಹಾಯ ಮಾಡಲು ಕಾದಿರುವ ಜೀವಿಸುವ ದೇವರಿಗೆ ಹೆಚ್ಚಾಗಿ ವಿಜ್ಞಾಪಿಸಿಕೊಳ್ಳಬೇಕೆಂಬ ಎಚ್ಚರಿಕೆಯನ್ನು ನಾವು ಹೊಂದಿರುತ್ತೇವೆ. ಏಕೆಂದರೆ "ಸತ್ಪುರುಷನ ಗತಿಸ್ಥಾಪನೆಯು ದೇವರಿಂದಲೇ ಆಗಿರುತ್ತದೆ" (ಕೀರ್ತ. 38:23). "ನಿಮ್ಮಲ್ಲಿ ಅಸ್ವಸ್ಥನಾಗಿರುವವನು ಇದ್ದಾನೋ? ಅವನು ಸಭೆಯ ಹಿರಿಯರನ್ನು ಕರೇಕಳುಹಿಸಲಿ. ಅವರು ಕರ್ತನ ಹೆಸರಿನಿಂದ ಅವನಿಗೆ ಎಣ್ಣೆ ಹಚ್ಚಿ ಅವನಿಗೋಸ್ಕರ ದೇವರನ್ನು ಪ್ರಾರ್ಥಿಸಲಿ. ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ರೋಗಿಯನ್ನು ರಕ್ಷಿಸುವುದು. ಕರ್ತನು ಅವನನ್ನು ಎಬ್ಬಿಸುವನು ಮತ್ತು ಪಾಪ ಮಾಡಿದವನಾಗಿದ್ದರೆ ಅದು ಪರಿಹಾರವಾಗುವುದು. ಹೀಗಿರಲು, ನೀವು ಸ್ವಸ್ಥರಾಗಬೇಕಾಗಿದ್ದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ. (ಯಾಕೋಬ 5: 14-16) "ಯಾಕೆಂದರೆ ಉದ್ಧಾರವು ಮೂಡಲಿಂದಾಗಲೀ ಪಡುವಲಿಂದಾಗಲೀ ಅರಣ್ಯದಿಂದಾಗಲೀ ಬರುವುದಿಲ್ಲ. ಆದರೆ ದೇವರು ತಾನೇ ನ್ಯಾಯಾಧೀಶನಾಗಿದ್ದಾನೆ" (ಕೀರ್ತ. 75:1-7). "ನೀವು ನಿಮ್ಮ ಮಕ್ಕಳನ್ನು ಆಹುತಿ ಕೊಡಬಾರದು. ಕಣಿ ಹೇಳುವವರು, ಶಕುನ ನೋಡುವವರು, ಯಂತ್ರ ಮಂತ್ರಗಳನ್ನು ಮಾಡುವವರು, ಮಾಟಗಾರರು, ತಂತ್ರಗಾರರು, ಸತ್ತವರನ್ನು ವಿಚಾರಿಸುವವರು, ಬೇತಾಳಿಕರು, ಪ್ರೇತಸಿದ್ಧರು ಇಂಥವರು ಯಾರೂ ನಿಮ್ಮಲ್ಲಿ ಇರಬಾರದು. ಇಂಥ ಕೆಲಸಗಳನ್ನು ನಡೆಸುವವರು ನನಗೆ ಅಸಹ್ಯರಾಗಿದ್ದಾರೆ" (ಧರ್ಮೋ. 18:10-12) ಎಂದು ದೇವರು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದನು. "ಮಾಟಗಾರರೂ, ಜಾರರೂ, ಕೊಲೆಗಾರರೂ, ವಿಗ್ರಹಾರಾಧಕರೂ, ಸುಳ್ಳಾದದ್ದನ್ನು ಪ್ರೀತಿಸಿ ನಡೆಸುವವರೆಲ್ಲರೂ (ದೇವರ ರಾಜ್ಯದ) ಹೊರಗಿರುವವರು. (ಪ್ರಕ. 22:15) ನೀನು ಬೇತಾಳಿಕರ, ಶಾಕುನಿಕರ ಕಡೆಗೆ ತಿರುಗಿಕೊಳ್ಳಲೂ ಬಾರದು ಅವರಲ್ಲಿ ವಿಚಾರಿಸಲೂ ಬಾರದು. ಇಲ್ಲವಾದರೆ ಅವರಿಂದ ಪ್ರೇರಿತರಾಗಿ ಪಾಪ ಮಾಡಿ ಅವರಿಂದ ಕೆಡಿಸಲ್ಪಡುವಿರಿ. "ನಿಮ್ಮ ದೇವರಾದ ನಾನು ಯೆಹೋವನು" (ಯಾಜ. 19:31). "ಲೊಚಗುಟ್ಟುವ ವಿಟಿಪಿಟಿಗುಟ್ಟುವ ಪ್ರೇತ ವಿಚಾರಕರನ್ನೂ ಬೇತಾಳಿಕರನ್ನೂ ಆಶ್ರಯಿಸಿರಿ ಎಂದು ಒಂದು ವೇಳೆ ನಿಮಗೆ ಹೇಳಿಯಾರು. ಜನರು ತಮ್ಮ ದೇವರನ್ನೇ ಆಶ್ರಯಿಸಬಾರದೇ? ಜೀವಿತರಾಗಿ ಸತ್ತವರಲ್ಲಿ ವಿಚಾರಿಸುವುದು ಯುಕ್ತವೋ? ದೇವರ ಧರ್ಮಶಾಸ್ತ್ರದ ಕಡೆಗೆ ತಿರುಗಿಕೊಳ್ಳಿರಿ. ಅವರಲ್ಲಿ ಬೆಳಕಿಲ್ಲದ ಕಾರಣ ಅವರು ಇದಕ್ಕನುಸಾರವಾಗಿ ಮಾಡಲಾರರು" (ಯೆಶಾಯ 8:19-20)

Copyright ANCP

ನೀನು ಈ ಚಿಕ್ಕ ಪುಸ್ತಕವನ್ನು ಓದುತ್ತಿರುವಾಗ ದೇವರು ನಿನ್ನೊಂದಿಗೆ ಮಾತನಾಡುತ್ತಾ ನಿನ್ನ ಪಾಪಗಳಿಗಾಗಿ ಪಶ್ಚಾತ್ತಾಪ ಪಡುವಂತೆಯೂ ನಿನ್ನ ಜೀವಿತವನ್ನು ಆತನಿಗೆ ಅರ್ಪಿಸುವಂತೆಯೂ ಪ್ರೇರೇಪಿಸುತ್ತಾನೆ. ಆದರೆ ನಿನ್ನಲ್ಲಿರುವ ಈ ಆಮೆಯ ಸ್ವಭಾವವು ಮಧ್ಯೆ ಪ್ರವೇಶಿಸಿ, ನೀನು ದೇವರಿಗಾಗಿ ಮಾಡಬೇಕೆಂದಿರುವ ಈ ನಿರ್ಧಾರವನ್ನು ಮುಂದಕ್ಕೆ ಹಾಕಲು ವಿವಿಧ ರೀತಿಯಿಂದ ಪ್ರೇರೇಪಿಸುತ್ತದೆ. ಹೀಗೆ, ನಿನ್ನ ಹೃದಯವನ್ನು ಭಯದಿಂದ ತುಂಬಿಸಲು ಪ್ರಯತ್ನಿಸುತ್ತದೆ. "ನಾನು ಒಬ್ಬ ನಿಜಕ್ರೈಸ್ತನಾದರೆ ನನ್ನ ಜನರು, ನನ್ನ ಸ್ನೇಹಿತರು, ಏನೆಂದಾರು? ಲೋಕವು ಏನೆನ್ನಬಹುದು? ನಾನು ನರ್ತನ ಕೂಟಗಳೇ ಮುಂತಾದ ವಿನೋದಗಳಲ್ಲಿ, ಲೌಕಿಕ ಮನೋರಂಜನೆಯ ಕೂಟಗಳಲ್ಲಿ ಇನ್ನು ಮುಂದೆ ಪಾಲು ತೆಗೆದುಕೊಳ್ಳದಿದ್ದಲ್ಲಿ ನನಗೆ ಏನೆಲ್ಲಾ ಸಂಭವಿಸಬಹುದು?" ಕ್ರಿಸ್ತನಲ್ಲಿ ನಮಗಿರುವ ಅಪಾರವಾದ ಐಶ್ವರ್ಯವೂ, ಆತನು ಅನುಗ್ರಹಿಸುವ ವಿಶೇಷ ಸಮಾಧಾನ, ವರ್ಣಿಸಲಸಾಧ್ಯವಾದ ಆನಂದ, ಆತನ ಮಹಿಮೆ, ಸಂತೋಷಭರಿತವಾದ ನಿತ್ಯಜೀವ ಮುಂತಾದವುಗಳನ್ನು ನೀನು ನೋಡುವುದರ ಬದಲು, ಒಂದು ವೇಳೆ ಕ್ರಿಸ್ತನನ್ನು ನಿನ್ನ ಹೃದಯದೊಳಗೆ ಸ್ವೀಕರಿಸುವುದಾದರೆ ನೀನು ಕಳಕೊಳ್ಳುವ, ಇಲ್ಲವೇ ಬಿಟ್ಟುಬಿಡಬೇಕಾದ ವಿಷಯಗಳನ್ನು ನೋಡಲು ಪ್ರಾರಂಭಿಸಿದರೆ, ಒಂದೆಡೆ ಮನುಷ್ಯರ ಭಯವೂ ಮತ್ತೊಂದೆಡೆ ಮರಣದ ಭಯವೂ ನಿನ್ನನ್ನು ಬಾಧಿಸಿ, ನಿನ್ನನ್ನು ಪಿಶಾಚನ ಬಂಧನದೊಳಗಿರಿಸುತ್ತದೆ. ಮರಣದ ಭಯದಿಂದ ಜೀವಮಾನವೆಲ್ಲಾ ದಾಸತ್ವದಲ್ಲಿರುವವರನ್ನು ಬಿಡುಗಡೆಗೊಳಿಸಲು ಯೇಸುಕ್ರಿಸ್ತನು ಬಂದನು. (ಇಬ್ರಿಯ 2:14-15) ಹೀಗೆ ಮೈಗಳ್ಳತನದಿಂದಾಗಿ, ನಿನ್ನ ಹೃದಯವು ಕಠಿಣವಾಗುತ್ತಾ ಹೋಗಿ, ಕೊನೆಗೆ ಆಮೆಯ ಚಿಪ್ಪಿನಂತೆ ಕಡು ಕಠಿಣವಾಗುತ್ತದೆ.

5. ಚಿರತೆಯು ಒಂದು ಭಯಂಕರ ಹಾಗೂ ಕ್ರೂರವಾದ ಪ್ರಾಣಿಯಾಗಿರುತ್ತದೆ. ದ್ವೇಷ, ಕ್ರೋಧ, ಮುಂಗೋಪ ಮುಂತಾದವುಗಳು ಅನೇಕ ವೇಳೆ ಮನುಷ್ಯನ ಹೃದಯವನ್ನು ಆಳುತ್ತಾ, ಕೊನೆಗೆ ಅವನನ್ನೂ ಕೊಲೆಪಾತಕತನಕ್ಕೆ ನಡಿಸುತ್ತದೆ. ನೀನು ನಿನ್ನ ಸ್ವಪ್ರಯತ್ನದಿಂದ ನಿನ್ನ ಕೋಪವನ್ನು ನಿನ್ನ ಅಂಕೆಯೊಳಗೆ ಇರಿಸಲು ಶಕ್ತನಾಗಿರುವಂತೆ ತೋರಬಹುದು. ಆದರೆ ಅದು ಥಕ್ಕನೆ ಮೊದಲಿಗಿಂತಲೂ ಉಗ್ರವಾಗಿ ಉಕ್ಕಿ ಬರುವುದು. ಆದುದರಿಂದ, ನಿನ್ನ ಹೃದಯದಲ್ಲಿ ಕೋಪವು ಇದೆ ಎಂದು ಒಪ್ಪಿಕೊಂಡು, ಅದರಿಂದ ನಿನ್ನನ್ನು ಬಿಡಿಸಲು ಯೇಸುಕ್ರಿಸ್ತನಲ್ಲಿ ಬೇಡಿಕೊಳ್ಳುವುದೇ ಉತ್ತಮ ಮಾರ್ಗ. "ನಿಮ್ಮ ದೃಷ್ಟಿಯಲ್ಲಿ ಯಾವ ಕೋಪವೂ ಇಲ್ಲದಿರಲಿ" (ಆದಿ: 45:5 ಭಾಷಾಂತರ). "ಕೋಪವು ಕ್ರೂರ, ಕ್ರೋಧವು ಪ್ರವಾಹ, ಮಾತ್ಸರ್ಯಕ್ಕೆದುರಾಗಿ ಯಾರು ನಿಂತಾರು?' (ಜ್ಞಾನೋಕ್ತಿ 27:4) "ನಿನ್ನ ಮನಸ್ಸು ಕೋಪಕ್ಕೆ ಆತುರ ಪಡದಿರಲಿ. ಕೋಪಕ್ಕೆ

ಮೂಢರ ಎದೆಯೇ ನೆಲೆ." (ಪ್ರಸಂಗಿ 7:9) "ಎಲ್ಲಾ ಕೋಪ, ಕ್ರೋಧ – ಇವುಗಳನ್ನು ವಿಸರ್ಜಿಸಿಬಿಡಿರಿ" (ಕೊಲೊ: 3:8).

ಯಾವುದಾದರೂ ದುಷ್ಕೃತ್ಯ ಇಲ್ಲವೇ ಪ್ರತೀಕಾರ ಸಲ್ಲಿಸಲು ಅನೇಕ ಹೇಡಿಗಳು ಮದ್ಯವನ್ನು ಕುಡಿಯುತ್ತಾರೆ. ಆದರೆ, "ದ್ರಾಕ್ಷಾರಸವು ಸರ್ಪದ ವಿಷದಂತೆ ಮರಣಕರ ವಾದದ್ದು." (ಧರ್ಮೋ: 32:33 ಭಾಷಾಂತರ) ಪಾಪಮಯ ಹೃದಯಕ್ಕೆ ಪ್ರತೀಕಾರವು ಹಿತಕರವಾಗಿ ತೋರುತ್ತದೆ. ನಮಗಾದರೋ ಮುಯ್ಯಿ ತೀರಿಸುವವನು ದೇವರು ತಾನೇ! ಯೇಸುಕ್ರಿಸ್ತನು, "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು" ಎಂತಲೂ, "ನಿಮ್ಮ ವೈರಿಗಳನ್ನು ಪ್ರೀತಿಸಿರಿ" ಎಂತಲೂ ಬೋಧಿಸಿದ್ದಾನೆ. ನಮ್ಮ ವಿರೋಧವಾಗಿ ತಪ್ಪು ಮಾಡಿದವರನ್ನು ನಾವು ಕ್ಷಮಿಸುವುದಾದರೆ, ನಮ್ಮ ತಪ್ಪುಗಳನ್ನು ಕ್ಷಮಿಸುವೆನೆಂದು ದೇವರು ವಾಗ್ದಾನ ಮಾಡಿದ್ದಾನೆ. ತನ್ನೊಳಗೆ ಗುಣುಗುಟ್ಟುತ್ತಿರುವ ಹೃದಯವು ದೇವರ ಕೋಪಕ್ಕೆ ಪಾತ್ರವಾಗಿದೆ. ರಕ್ತಪಾತ, ಯುದ್ಧ, ಕಲಹಗಳನ್ನು ಅಪೇಕ್ಷಿಸುವ ಕೆಟ್ಟ ದುರಾಶೆಯು ಮನುಷ್ಯನ ಹೃದಯದಲ್ಲಿದೆ. ಆದುದರಿಂದ, ನಮ್ಮ ಆತ್ಮವು ನಾಶವಾಗದೇ ಉಳಿಯಬೇಕಾದರೆ, ನಮ್ಮ ಹೃದಯದಲ್ಲಿ ನಿಜಶಾಂತಿಯು ಸ್ಥಾಪಿಸಲ್ಪಡಬೇಕು.

6. ಹಾವು – ಇದು ಏದೇನ್ ತೋಟದಲ್ಲಿ ಹವ್ವಳನ್ನು ವಂಚಿಸಿ, ದೇವರೊಂದಿಗೆ ಆಕೆಗಿದ್ದ ಆ ಮಧುರ ಅನ್ಯೋನ್ಯತೆಯನ್ನೂ, ಸಮಾಧಾನವನ್ನೂ ಕೆಡಿಸಿತು. ಸೈತಾನನು ದೇವದೂತನಾಗಿದ್ದರೂ, ದೇವರ ಅನ್ಯೋನ್ಯತೆಯಿಂದ ದೊಬ್ಬಲ್ಪಟ್ಟನು. ಅನಂತರ, ಆದಾಮ–ಹವ್ವನವರು ತನ್ನದಾಗಿದ್ದ ಆ ಸ್ಥಾನವನ್ನು ಹೊಂದಿದವರೋ ಎಂಬಂತೆ ದೇವರ ಪರಿಪೂರ್ಣ ಐಕ್ಯದಲ್ಲಿದ್ದುಕೊಂಡು, ಈ ಲೋಕದ ಅಧಿಪತಿಗಳೋ ಎಂಬಂತೆ ಜೀವಿಸುವುದನ್ನು ಸೈತಾನನು ನೋಡುವಾಗ, ಆತನಲ್ಲಿ ಮತ್ಸರವು ಉಕ್ಕಿಬಂದಿತು. ಇದರಿಂದ ಅವನು ಅವರ ನಾಶನವನ್ನು ಆಲೋಚಿಸಿ, ದೇವರೊಂದಿಗೆ ಅವರಿಗಿದ್ದ ಆ ಪರಿಪೂರ್ಣ ಅನ್ಯೋನ್ಯತೆಯನ್ನು ಕೆಡಿಸುವುದರಲ್ಲಿ ಜಯಶಾಲಿಯಾದನು. ಇದೇ ಪಿಶಾಚನಿಂದ ಉಂಟಾಗುವ ಮತ್ಸರ ಮತ್ತು ಹೊಟ್ಟೇಕಿಚ್ಚು, ಮನುಷ್ಯನ ಹೃದಯದಲ್ಲಿ ತುಂಬಿಕೊಂಡು, ಇತರರು, ಸಂತೋಷದಿಂದಲೂ ತೃಪ್ತಿಯಿಂದಲೂ ಜೀವಿಸುತ್ತಿರುವುದನ್ನು ನೋಡ ಲಾರದೇ, ಅವರ ಹೃದಯದ ಸಂತೋಷವನ್ನು ಕೆಡಿಸುತ್ತದೆ. "ಮತ್ಸರವು ಪಾತಾಳದಷ್ಟು ಕ್ರೂರ" (ಪರಮಗೀತ: 8:6). ಅದು, ಇತರರ ಸಂತೋಷವನ್ನು ಕೆಡಿಸಬೇಕೆಂಬ ದುರಾ ಲೋಚನೆಗಳನ್ನು ಹೃದಯದಲ್ಲಿ ತರುವುದು ಮಾತ್ರವಲ್ಲದೆ ಕೊಲೆ ಮಾಡುವುದಕ್ಕೂ ಪ್ರೇರೇಪಿಸುತ್ತದೆ. ಕೆಲವು ಜನರಲ್ಲಿ ಈ ಸ್ಥಿತಿಯು ಸ್ಪಷ್ಟವಾಗಿ ಕಂಡುಬರುತ್ತದೆ. ವ್ಯಾಪಾರ ಮತ್ತಿನ್ನಿತರ ಜೀವನದ ವ್ಯವಹಾರಗಳಲ್ಲಿ ವಿವರಿಸಲಾರದ ದುರವಸ್ಥೆಯನ್ನೂ, ಹಗೆತನ ವನ್ನೂ ಇದು ಉಂಟುಮಾಡುತ್ತದೆ. ದೇವರು, ಇತರರನ್ನು ತಮಗಿಂತ ಹೆಚ್ಚು ಫಲ ಕಾರಿಯಾಗಿ ಉಪಯೋಗಿಸುವುದನ್ನು ನೋಡುವಾಗ, ಅನೇಕ ವೇಳೆ ಕ್ರಿಸ್ತನ ಸೇವಕರಲ್ಲಿ,

Copyright AMGP

ಬೋಧಕರಲ್ಲಿ, ಇನ್ನು ಸಭಾಪಾಲಕರಲ್ಲೂ ಈ ಸ್ವಭಾವವು ಬಾಧೆಯನ್ನುಂಟುಮಾಡುವುದು. ಆದುದರಿಂದ, ಅವರೂ "ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿಸಲ್ಪಟ್ಟ" ಪವಿತ್ರಾತ್ಮನ ಪ್ರೀತಿಯಿಂದ ತುಂಬಿದ್ದು, ಯಾವಾಗಲೂ ಎಚ್ಚರಿಕೆಯಿಂದ ಇರುವುದು ಅವಶ್ಯವಾಗಿದೆ. ಇಲ್ಲವಾದರೆ, ಈ ಮತ್ಸರದಿಂದಾಗಿ ಅವರ ಸೇವೆಯೂ, ಅವರಿಂದ ದೇವರಿಗೆ ಆಗುವ ಉಪಯೋಗವೂ ಕೆಟ್ಟುಹೋಗುವುದು.

7. ಕಪ್ಪೆಯು ಭೂಮಿಯನ್ನು ಆತುಕೊಂಡು ಜೀವಿಸುತ್ತದೆ. ಹೀಗೆ ಅದು ಅತಿಯಾಶೆಯನ್ನೂ ಎಲ್ಲಾ ಕೆಟ್ಟತನಕ್ಕೆ ಮೂಲವಾದ (1 ತಿಮೊ: 8:10) ಹಣದಾಶೆಯನ್ನೂ ಸೂಚಿಸುತ್ತದೆ. ಆಫ್ರಿಕಾದ ಕಾಂಗೋ ದೇಶದಲ್ಲಿ ಜೀವಿಸುವ ಕೆಲವು ಜಾತಿಯ ಕಪ್ಪೆಗಳು ಕೆಲವು ವೇಳೆ, ತಮ್ಮ ಹೊಟ್ಟೆಯೊಡೆದು ಸಾಯುವ ವರೆಗೂ ಇರುವೆಗಳನ್ನು ಅತಿಯಾಗಿ ತಿನ್ನುವುದನ್ನು ಕಂಡುಕೊಂಡಿದ್ದಾರೆ. ಒಬ್ಬನು ಅತಿಯಾಶೆಯಿಂದ ತುಂಬಿರುವುದಾದರೆ, ಬಡವರಿಗೂ, ಕೊರತೆಯಲ್ಲಿರುವವರಿಗೂ ಸಹಾಯ ಮಾಡಲು ಅವನು ಕೈದೆರೆಯುವುದಿಲ್ಲ. ಅಲ್ಲದೆ, ನುಸಿ ಹಿಡಿದು, ಕಿಲುಬು ಹತ್ತಿ ಕೆಟ್ಟುಹೋಗುವ ಐಶ್ವರ್ಯಕ್ಕಾಗಿ ಯೋಗ್ಯ ಹಾಗೂ ಅಯೋಗ್ಯ ಮಾರ್ಗಗಳಿಂದ ಪ್ರಯಾಸಪಡುತ್ತಾನೆ. ಯೇಸುಸ್ವಾಮಿಯು ತಾನೇ, "ಭೂಲೋಕದಲ್ಲಿ ಗಂಟುಕಟ್ಟಿ ಇಟ್ಟುಕೊಳ್ಳಬೇಡಿರಿ, ಇಲ್ಲಿ ಅಂತೂ ಅದು ನುಸಿ ಹಿಡಿದು, ಕಿಲುಬು ಹತ್ತಿ ಕೆಟ್ಟುಹೋಗುವುದು. ಕಳ್ಳರು ಕನ್ನಾಕೊರೆದು ಕದಿಯುವರು. ಆದರೆ ಪರಲೋಕದಲ್ಲಿ ಗಂಟುಕಟ್ಟಿ ಇಟ್ಟುಕೊಳ್ಳಿರಿ. ಅಲ್ಲಿ ಅದು ನುಸಿ ಹಿಡಿದು, ಕಿಲುಬು ಹತ್ತಿ ಕೆಟ್ಟುಹೋಗಲಾರದು. ಅಲ್ಲಿ ಕಳ್ಳರು ಕನ್ನಾಕೊರೆಯುವುದೂ ಇಲ್ಲ. ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸೂ ಇರುವುದಷ್ಟೆ" (ಮತ್ತಾಯ 6:19-22) ಎಂದು ಅಂದಿರುವನು. ಆಕಾನನು ಚಿನ್ನ, ಬೆಳ್ಳಿ, ವಿಶೇಷ ರತ್ನ, ವಸ್ತ್ರ ಮುಂತಾದವುಗಳನ್ನು ಆಶಿಸಿದುದರಿಂದ ಅವನೂ, ಅವನ ಮನೆಯವರೆಲ್ಲರೂ ನಾಶವಾದರು. (ಯೆಹೊ: 7) ಹಣದಾಸೆಯು, ಯೇಸುವಿನ ಶಿಷ್ಯನಾದ ಇಸ್ಕಾರಿಯೋತ ಯೂದನು ತನ್ನ ಯಜಮಾನನೂ, ಗುರುವೂ ಆಗಿದ್ದ ಯೇಸುವನ್ನು ವೈರಿಗಳ ಕೈಗೆ ಒಪ್ಪಿಸಿಕೊಡುವಂತೆ ಮಾಡಿತು. ಆದುದರಿಂದ ಆತನು ಕೊನೆಗೆ ನೇಣು ಹಾಕಿಕೊಂಡು ಸತ್ತನು. ಹಣವಾಗಲೀ, ಚಿನ್ನವಾಗಲೀ ಕೆಡುಕಲ್ಲ. ಆದರೆ ಮನುಷ್ಯನ ಹೃದಯವನ್ನು ಕೆಡಿಸುವ ಹಣದಾಸೆಯು ದೊಡ್ಡ ಕೆಡುಕಾಗಿದೆ.

ಈಗಲೂ, ಯಾವುದೇ ವರ್ಗ, ವರ್ಣಬೇಧವಿಲ್ಲದೆ ಸಾವಿರಾರು ಜನರು ಸುಲಭವಾಗಿ ಅಧಿಕ ಐಶ್ವರ್ಯವನ್ನು ಗಳಿಸುವ ದುರಾಶೆಯಿಂದ ಜುಗಾರಿ, ಕುದುರೆಜೂಜು, ಮುಂತಾದವುಗಳಲ್ಲಿ ಅಧಿಕ ಹಣವನ್ನು ಪಣವಾಗಿರಿಸುವ ಅಭ್ಯಾಸದಿಂದ ಕೂಡಿ ಜೀವಿಸುತ್ತಿರುವರು. ಈ ರೀತಿ, ಅಧಿಕ ಪ್ರಯಾಸವಿಲ್ಲದೇ ಐಶ್ವರ್ಯವಂತರಾಗಬೇಕೆಂಬ ದುರಾಶೆಯು ಅನೇಕ ವೇಳೆ ಕಳ್ಳತನ, ಕೊಲೆ, ಇಲ್ಲವೇ ಆತ್ಮಹತ್ಯೆಗಳಿಗೆ ನಡೆಸುವುದು. ಈ ಅತಿ ಆಸೆ, ಹಣದಾಸೆ ಮುಂತಾದುವುಗಳೊಂದಿಗೆ ನಮ್ಮ ಹೃದಯವನ್ನು ಪ್ರವೇಶಿಸುವ

ಅನೇಕ ಕೆಟ್ಟ ವಿಷಯಗಳಿವೆ. ಅವುಗಳು ಯಾವುವೆಂದರೆ, ಸ್ಥಾನ, ಮಾನ, ಅಧಿಕಾರದ ದುರಾಶೆ. ಅದು ಇತರರ ಮೇಲೆ ಪ್ರಯೋಗಿಸಬಹುದಾದ ಅಧಿಕಾರವಾಗಿರಬಹುದು. ಬಡವರ ಮೇಲೆ ಭಾರ ಹಾಕುವ ಹಣದ ದರ್ಪವಾಗಿರಬಹುದು, ಇಲ್ಲವೇ ಧಾರ್ಮಿಕ ಅಧಿಕಾರವಾಗಿರಬಹುದು. ಈ ರೀತಿಯ ಅಧಿಕಾರದಿಂದ ದೇವರಿಗಿಂತ ಹೆಚ್ಚಾಗಿ ಸಭೆಯ ಮೇಲೆ ಅಭಿಮಾನ ಉಂಟಾಗುತ್ತದೆ. ಇದರ ಫಲವಾಗಿ, ತನ್ನ ಸ್ವಂತ ಸಭೆಯನ್ನು ಸೇರಿಕೊಳ್ಳದೆ ದೇವರನ್ನು ಹಿಂಬಾಲಿಸುತ್ತಿರುವ ನಿಜಕ್ರೈಸ್ತರನ್ನು ಖಂಡಿಸುವ ಸ್ವಭಾವವು ಅನೇಕ ಮನುಷ್ಯರನ್ನು ಹಿಡಿದಿರುತ್ತದೆ. (ಮಾರ್ಕ: 9:38) ಯೇಸುಸ್ವಾಮಿಯು, "ಎಲ್ಲಾ ಲೋಭಕ್ಕೂ ಎಚ್ಚರಿಕೆಯಾಗಿದ್ದು ನಿಮ್ಮನ್ನು ಕಾಪಾಡಿಕೊಳ್ಳಿರಿ. ಒಬ್ಬನಿಗೆ ಎಷ್ಟು ಆಸ್ತಿ ಇದ್ದರೂ ಅದು ಅವನಿಗೆ ಜೀವಾಧಾರವಾಗುವುದಿಲ್ಲ" (ಲೂಕ: 12:15) ಎಂದು ಹೇಳಿದ್ದಾನೆ. ಬುದ್ಧಿಯಿಲ್ಲದ ಐಶ್ವರ್ಯವಂತನ ಸಾಮ್ಯವು ಹೀಗಿದೆ: "ಒಬ್ಬಾನೊಬ್ಬ ಐಶ್ವರ್ಯವಂತನ ಭೂಮಿಯು ಚೆನ್ನಾಗಿ ಫಸಲು ಬಿಟ್ಟಿತು. ಆಗ ಅವನು ತನ್ನೊಳಗೆ – 'ನಾನೇನು ಮಾಡಲಿ? ಬೆಳೆಯನ್ನು ತುಂಬಿಡುವುದಕ್ಕೆ ನನಗೆ ಸ್ಥಳವಿಲ್ಲವಲ್ಲಾ! ಎಂದು ಆಲೋಚಿಸಿ– ಒಂದು ಕೆಲಸ ಮಾಡುತ್ತೇನೆ. ನನ್ನ ಕಣಜಗಳನ್ನು ಕೀಳಿಸಿ, ಅವುಗಳಿಗಿಂತ ದೊಡ್ಡ ಕಣಜಗಳನ್ನು ಕಟ್ಟಿಸುವೆನು. ಅಲ್ಲಿ ನನ್ನ ಎಲ್ಲಾ ಧವಸ-ಧಾನ್ಯಗಳನ್ನು, ಸರಕುಗಳನ್ನು ತುಂಬಿಟ್ಟು ನನ್ನ ಜೀವಾತ್ಮಕ್ಕೆ – ಜೀವವೇ, ಅನೇಕ ವರುಷಗಳಿಗೆ ಬೇಕಾಗುವಷ್ಟು ಸರಕು ನಿನಗೋಸುಗ ಬಿದ್ದಿದೆ; ವಿಶ್ರಮಿಸಿಕೊ, ಊಟ ಮಾಡು, ಕುಡಿ, ಸುಖಪಡು ಎಂದು ಹೇಳುವೆನು' ಅಂದುಕೊಂಡನು. ಆದರೆ ದೇವರು ಅವನಿಗೆ–'ಬುದ್ಧಿಹೀನನು ನೀನು! ಈ ರಾತ್ರಿ ನಿನ್ನ ಪ್ರಾಣವನ್ನು ನಿನ್ನ ಕಡೆಯಿಂದ ಕೇಳುವೆನು. ಆಗ ನೀನು ಸಿದ್ಧಮಾಡಿಟ್ಟಿರುವುದು ಯಾರಿಗಾಗುವುದು' ಎಂದು ಹೇಳಿದನು. ತನಗೋಸ್ಕರ ದ್ರವ್ಯವನ್ನಿಟ್ಟುಕೊಂಡು, ದೇವರ ವಿಷಯದಲ್ಲಿ ಐಶ್ವರ್ಯವಂತನಾಗದೆ ಇರುವವನು ಅವನಂತೆಯೇ ಇದ್ದಾನೆ" (ಲೂಕ: 12:16). "ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿದರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು?" (ಮಾರ್ಕ 8:36). "ಪ್ರಾಣಾಧಾರಣೆಗೆ ಏನು ಊಟ ಮಾಡಬೇಕು? ದೇಹರಕ್ಷಣೆಗೆ ಏನು ಹೊದ್ದುಕೊಳ್ಳಬೇಕು? ಎಂದು ಚಿಂತೆಮಾಡಬೇಡಿರಿ... ಆದರೆ ದೇವರ ರಾಜ್ಯಕ್ಕಾಗಿ ತವಕಪಡಿರಿ, ಆಗ ಇದರ ಕೂಡ ಅವೂ ನಿಮಗೆ ದೊರಕುವವು... ಯಾಕೆಂದರೆ ನಿನ್ನ ನಿಧಿಯು ಇರುವಲ್ಲಿ ನಿನ್ನ ಮನಸ್ಸೂ ಇರುವುದು" (ಲೂಕ: 12:22-34 ಭಾಷಾಂತರ).

8. ಸೈತಾನನು ಎಲ್ಲಾ ಸುಳ್ಳುಗಾರರಿಗೂ, ಸುಳ್ಳಾದದ್ದನ್ನು ನಡೆಸುವವರಿಗೂ ಮೂಲ ತಂದೆಯಾಗಿದ್ದಾನೆ. ಎಲ್ಲಾ ತರದ ಪಾಪಕ್ಕೂ, ನಮ್ಮನ್ನು ಪ್ರೇರೇಪಿಸುವವನೂ ಆತನೇ. ನಮ್ಮ ಹೃದಯಗಳಲ್ಲಿ ಆಳುತ್ತಿರುವವನು ಆತನೇ. "ಸೈತಾನನು ನಿಮ್ಮ

Copyright ANCP

ತಂದೆ. ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದು, ನಿಮ್ಮ ತಂದೆಯ ದುರಿಚ್ಛೆಗಳನ್ನು ನಡೆಸಬೇಕೆಂದಿದ್ದೀರಿ. ಅವನು ಆದಿಯಿಂದಲೂ ಕೊಲೆಗಾರನಾಗಿದ್ದು, ಸತ್ಯದಲ್ಲಿ ನಿಲ್ಲಲಿಲ್ಲ. ಅವನಲ್ಲಿ ಸತ್ಯವು ಇಲ್ಲವೇ ಇಲ್ಲ. ಅವನು ಸುಳ್ಳಾಡುವಾಗ ಸ್ವಭಾವಾನುಸಾರವಾಗಿ ಆಡುತ್ತಾನೆ. ಅವನು ಸುಳ್ಳುಗಾರನೂ, ಸುಳ್ಳಿಗೆ ಮೂಲಪುರುಷನೂ ಆಗಿರುತ್ತಾನೆ" (ಯೋಹಾನ 8:44) ಎಂದು ಯೇಸುಕ್ರಿಸ್ತನು ಹೇಳಿದ್ದಾನೆ. ಸುಳ್ಳಿನಲ್ಲಿ ಸಣ್ಣದು-ದೊಡ್ಡದು ಎಂಬ ಬೇಧವಿಲ್ಲ. ಎಲ್ಲವೂ ಕೆಟ್ಟದ್ದೇ. ಅದು, ಮಾತು, ಬರವಣಿಗೆ ಹಾಗೂ ಕಾರ್ಯಗಳಲ್ಲಿ ಕಂಡು ಬರಬಹುದು. ಕಪಟಿಯು ತನ್ನ ನಿಜಸ್ಥಿತಿಯನ್ನು ಮರೆಮಾಡಿ, ತನ್ನಲ್ಲಿರದ ಸ್ಥಿತಿಯನ್ನು ತೋರಿಸಲು ಪ್ರಯತ್ನಿಸುವುದರಿಂದ ಆತನು ಸುಳ್ಳುಗಾರನಾಗಿದ್ದಾನೆ. ದೇವರು ಸುಳ್ಳು ಹೇಳಲಾರನು – ಆದ್ದರಿಂದ ನಿಜಕ್ರೈಸ್ತನೂ ಸುಳ್ಳು ಹೇಳಲಾರನು. (ತೀತ: 1:2). "ನಾವು ದೇವರ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ. ಸತ್ಯವನ್ನನುಸರಿಸುವವರಲ್ಲ." (1 ಯೋಹಾನ 1:6) "ನಾಯಿಗಳಂತಿರುವವರೂ ಮಾಟಗಾರರೂ ಜಾರರೂ ಕೊಲೆಗಾರರೂ ವಿಗ್ರಹಾರಾಧಕರೂ ಸುಳ್ಳಾದದನ್ನು ಪ್ರೀತಿಸುವವರೆಲ್ಲರೂ (ದೇವರ ರಾಜ್ಯದ) ಹೊರಗಿರುವವರು" (ಪ್ರಕ: 22:15) ದೇವರು ಸುಳ್ಳಾಡುವವರನ್ನೂ ಸುಳ್ಳು ಸಾಕ್ಷಿ ಹೇಳುವವರನ್ನೂ ಹಗೆಮಾಡುತ್ತಾನೆ (ಜ್ಞಾನೋಕ್ತಿ 6:19)

9. ನಕ್ಷತ್ರವು ಪ್ರತಿಯೊಬ್ಬ ಮನುಷ್ಯನಲ್ಲಿರುವ ಮನಸ್ಸಾಕ್ಷಿಯನ್ನು ಸೂಚಿಸುತ್ತದೆ. ಅದು ಕೆಟ್ಟುಹೋದದ್ದಾಗಿಯೂ, ತಿಳಿದೂ ತಿಳಿದೂ ಪಾಪ ಮಾಡಿದ್ದರಿಂದ ಒಂದು ವೇಳೆ ಸಂಪೂರ್ಣ ಸತ್ತುಹೋದದ್ದೂ ಆಗಿರಬಹುದು. ಅದು ಕುರುಡಾದದ್ದೂ, ಸತ್ಯಾಸತ್ಯತೆಗಳ ವಿವೇಚನೆಯನ್ನು ಕಳಕೊಂಡದ್ದೂ ಆಗಿರುವುದರಿಂದ ತನ್ನ ಸ್ವಂತ ಕಾರ್ಯದ ತಪ್ಪು ಒಪ್ಪುಗಳನ್ನು ಗ್ರಹಿಸಲಾರದ ಸ್ಥಿತಿಯಲ್ಲಿರುತ್ತದೆ. ಇಂಥಾ ಕೆಟ್ಟುಹೋದ ಮನಸ್ಸಾಕ್ಷಿಯು ಬಹಳ ಸಮಾಧಾನದಿಂದಿರಲೂ ಬಹುದು. ಸಮಾಧಾನ ಕಳಕೊಂಡದ್ದಾಗಿಯೂ ಇರಬಹುದು. ಈಗ ಅದು ಕ್ಷಮಿಸಬೇಕಾದಲ್ಲಿ ತಪ್ಪನ್ನು ಎತ್ತಿಹಿಡಿಯುತ್ತದೆ. ಖಂಡಿಸಬೇಕಾದಲ್ಲಿ ಕ್ಷಮಿಸಿ ಬಿಡುತ್ತದೆ. ಅದು ವಂಚಿಸುವ ಆತ್ಮಗಳ ನುಡಿಗೂ ದೆವ್ವಗಳ ಬೋಧನೆಗೂ ಲಕ್ಷ್ಯಕೊಟ್ಟು ಕ್ರಿಸ್ತನಂಬಿಕೆಯಿಂದ ಭ್ರಷ್ಟವಾದದ್ದೂ ಕಪಟದಿಂದ ಅಸತ್ಯವನ್ನಾಡುವ ಸ್ಥಿತಿಗೆ ಇಳಿದದ್ದೂ ಆಗಿರುವುದರಿಂದ, ಒಂದು ಕಾದ ಕಬ್ಬಿಣದಿಂದಲೋ ಎಂಬಂತೆ ಸುಟ್ಟು, ಯಾವ ವಿವೇಚನೆಯೂ ಪರಿಜ್ಞಾನವೂ ಇಲ್ಲದ್ದಾಗಿದೆ. (1 ತಿಮೊ: 4:0-2, ಇಬ್ರಿಯ 10:22)

10. ಕಣ್ಣು: ಹೃದಯದಲ್ಲಿ ನಡೆಯುವ ಸಮಸ್ತವನ್ನೂ ದೇವರು ವಿವೇಚಿಸಿ ನೋಡುತ್ತಾನೆ. ಆತನ ದಹಿಸುವ ದೃಷ್ಟಿಯಿಂದ ಯಾವುದನ್ನು ಮರೆಯಾಗಿರಿಸುವುದೂ ಸಾಧ್ಯವಿಲ್ಲ. ಆದುದರಿಂದ ಹೃದಯದ ಎಲ್ಲಾ ಆಲೋಚನೆಗಳನ್ನೂ ಉದ್ದೇಶಗಳನ್ನೂ

Copyright ANGP

ಆತನು ನೋಡಿ ತಿಳಿದುಕೊಂಡಿರುತ್ತಾನೆ. ನೀನು ನಿನ್ನ ಕೆಟ್ಟ ಕಾರ್ಯವನ್ನು ಮಾಡಿತೀರಿಸುವ ಕಗ್ಗತ್ತಲಿನ ರಾತ್ರಿಯಲ್ಲಾಗಲೀ, ದಟ್ಟವಾದ ಅರಣ್ಯದಲ್ಲಾಗಲೀ, ಆಳವಾದ ಕೊಳಚೆಯಲ್ಲಾಗಲೀ, ಇನ್ನೆಲ್ಲಿ ಆ ಕಾರ್ಯಗಳನ್ನು ನಡೆಯಿಸುವುದಾದರೂ ಆತನು ಅದನ್ನು ನೋಡುತ್ತಾನೆ. (ಈ ಎಲ್ಲಾ ಚಿತ್ರಗಳಲ್ಲಿ ಈ ಕಣ್ಣು ಮನುಷ್ಯನ ಮುಖಭಾವಕ್ಕೆ ಅನುಗುಣವಾಗಿರುತ್ತದೆ.)

11. ಬೆಂಕಿಯ ಸಣ್ಣ ಸಣ್ಣ ನಾಲಗೆಗಳು ಪಾಪಿಯ ಹೃದಯದ ಸುತ್ತಲೂ ಆವರಿಸಿರುವ ದೇವರ ಪ್ರೀತಿಯನ್ನು ಸೂಚಿಸುತ್ತದೆ. ಆತನು ಪಾಪವನ್ನು ಹಗೆ ಮಾಡುವುದಾದರೂ ಮನುಷ್ಯರನ್ನು ಪ್ರೀತಿಮಾಡುತ್ತಾನೆ. ಆತನು ಪಾಪಿಯ ಮರಣವನ್ನು ಎಂದೂ ಅಪೇಕ್ಷಿಸುವುದಿಲ್ಲ. ಆದರೆ ಪಾಪಿಯು ಪಶ್ಚಾತ್ತಾಪದೊಡನೆ ತನ್ನ ಕಡೆಗೆ ತಿರುಗಿಕೊಂಡು, ಜೀವಿಸಬೇಕೆಂದು ಅಪೇಕ್ಷಿಸುತ್ತಾನೆ. ಯೇಸುಕ್ರಿಸ್ತನು ಪಾಪಿಗಳನ್ನು ರಕ್ಷಣೆ ಮಾಡುವುದಕ್ಕೋಸ್ಕರವೇ ಬಂದನು. ಪಶ್ಚಾತ್ತಾಪದಿಂದ ದೇವರ ಕಡೆಗೆ ತಿರುಗಿಕೊಳ್ಳುವ ಪಾಪಿಯ ವಿಷಯದಲ್ಲಿ ಪರಲೋಕದಲ್ಲಿ ದೊಡ್ಡ ಸಂತೋಷವುಂಟಾಗುತ್ತದೆ. ಬೆಂಕಿಯ ಈ ಚಿಕ್ಕ ನಾಲಗೆಗಳು "ಲೋಕದ ಪಾಪವನ್ನು ನಿವಾರಣೆ ಮಾಡುವ ದೇವರ ಕುರಿ" ಯಾದ ಯೇಸುಕ್ರಿಸ್ತನ ರಕ್ತವನ್ನೂ ಸಹ ಸೂಚಿಸುತ್ತದೆ.


12. ದೇವದೂತನು ದೇವರ ವಾಕ್ಯವನ್ನು ಸೂಚಿಸುತ್ತಾನೆ. ಮೋಸ ಹೋಗಿ, ಪಾಪದ ಹೊರೆಯನ್ನೇ ಹೊತ್ತ ಪಾಪಿಯ ಸಂಗಡ ಮಾತನಾಡಬೇಕೆಂದು ದೇವರು ಇಚ್ಛಿಸುತ್ತಾನೆ. ಇದರಿಂದ ಆತನು (ಇಲ್ಲವೇ ಆಕೆಯು) ಪಶ್ಚಾತ್ತಾಪ ಪಟ್ಟು ದೇವರ ಪ್ರೀತಿಯ ಬೆಳಕನ್ನು ತನ್ನ ಹೃದಯದೊಳಗೆ ಪ್ರವೇಶಿಸಲು ಬಿಡಬೇಕೆಂದು ಆತನು ಅಪೇಕ್ಷಿಸುತ್ತಾನೆ.

13. ಪಾರಿವಾಳವು ಪವಿತ್ರಾತ್ಮನ ಗುರುತಾಗಿದೆ. ಯಾಕೆಂದರೆ ಆತನು ಪಾಪ, ನೀತಿ, ನ್ಯಾಯ, ನ್ಯಾಯತೀರ್ಪಿನ ಕುರುಹನ್ನು ಹುಟ್ಟಿಸುವ ಸತ್ಯದ ಆತ್ಮನಾಗಿದ್ದಾನೆ. ಈ ಚಿತ್ರದಲ್ಲಿ ಪವಿತ್ರಾತ್ಮನು ಮನುಷ್ಯನ ಹೃದಯದ ಹೊರಗೆ ಇರುತ್ತಾನೆ. ಪಾಪವು ಆಳುತ್ತಿರುವ ಸ್ಥಳದಲ್ಲಿ ಆತನು ಬಂದು ನೆಲಸಲಾರನು.

ಈ ಚಿತ್ರವು ನಿನ್ನ ಹೃದಯದ ಸ್ಥಿತಿಯನ್ನು ತೋರಿಸುವುದಾದರೆ, ದೇವರ ಸಹಾಯಕ್ಕಾಗಿ ಕೂಗಿಕೋ. ನಿನ್ನ ಹೃದಯವನ್ನು ಆತನಿಗೆ ತೆರೆದು ಕೊಡು. ಆತನ ವಾಕ್ಯದ ಬೆಳಕು ಅದರೊಳಗೆ ಪ್ರಕಾಶಿಸಲಿ. "ಯೇಸುಕ್ರಿಸ್ತನ ಮೇಲೆ ನಂಬಿಕೆ ಇಡು. ಆಗ ನೀನು ರಕ್ಷಣೆ ಹೊಂದುವಿ." ದೇವರು ಸಿದ್ಧನಾಗಿ ಕಾದಿದ್ದಾನೆ. ನಿನ್ನ ಹೃದಯವನ್ನು ಮಾರ್ಪಡಿಸಿ, ನಿನಗೆ ನೂತನ ಹೃದಯವನ್ನೂ ನೂತನ ಆತ್ಮವನ್ನೂ ಕೊಡುವೆನೆಂದು ಆತನು ವಾಗ್ದಾನ ಮಾಡಿದ್ದಾನೆ. ಈ ವಿಷಯವು ಎರಡನೆಯ ಚಿತ್ರದಲ್ಲಿ ತೋರಿಸಲ್ಪಟ್ಟಿರುತ್ತದೆ.

Copyright ANGP

## ಎರಡನೆಯ ಚಿತ್ರವು




**ಪಾಪದ ಅರುಹಿನಿಂದ ಕೂಡಿ ದೇವರಿಗೆ ಸಮರ್ಪಿಸಲು ಸಿದ್ಧವಾದ ಹೃದಯ**

ಪಶ್ಚಾತ್ತಾಪದೊಡನೆ ದೇವರನ್ನು ಹುಡುಕಲು ಪ್ರಯತ್ನಿಸುವ ಹೃದಯವನ್ನು ಈ ಚಿತ್ರವು ತೋರಿಸುತ್ತದೆ. “ಸಜೀವವಾದ, ಕಾರ್ಯಸಾಧಕವಾದ, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದ, ಪ್ರಾಣ ಆತ್ಮಗಳನ್ನೂ, ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟರ ಮಟ್ಟಿಗೂ ತೂರಿಹೋಗುವಂಥದ್ದಾಗಿರುವ, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂತದ್ದಾಗಿರುವ (ಇಬ್ರಿ: 4:12) ದೇವರ ವಾಕ್ಯವೆಂಬ ಇಬ್ಬಾಯಿ

ಕತ್ತಿಯನ್ನು ದೇವದೂತನು ಹಿಡಿದುಕೊಂಡಿದ್ದಾನೆ. ದೇವರ ವಾಕ್ಯವು ಅವನಿಗೆ "ಪಾಪವು ಕೊಡುವ ಸಂಬಳ ಮರಣ" ಎಂತಲೂ, "ಒಂದೇ ಸಾರಿ ಸಾಯುವುದೂ ಆ ಮೇಲೆ ನ್ಯಾಯ ತೀರ್ಪು ಮನುಷ್ಯನಿಗೆ ನೇಮಕವಾಗಿದೆ" (ಇಬ್ರಿ: 9:27) ಎಂಬ ವಿಷಯಗಳನ್ನೂ ಜ್ಞಾಪಕಪಡಿಸುತ್ತದೆ. ಪಾಪಿಯ ಮತ್ತು ನಂಬದವನ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯಾಗಿದೆ.

ದೇವದೂತನು ತನ್ನ ಮತ್ತೊಂದು ಕೈಯಲ್ಲಿ ಒಂದು ತಲೆಬುರುಡೆಯನ್ನು ಹಿಡಿದುಕೊಂಡಿದ್ದಾನೆ. ನಾವೆಲ್ಲರೂ ಒಂದು ದಿನ ಸಾಯಲೇ ಬೇಕೆಂಬುದನ್ನು ಇದು ಪಾಪಿಗೆ ನೆನಪು ಉಂಟುಮಾಡುವಂಥಾದ್ದಾಗಿದೆ. ದೇಹದ ಆಶೆಗಳನ್ನೂ ಬಯಕೆಗಳನ್ನೂ ಈಡೇರಿಸುವುದಕ್ಕಾಗಿ ನಾವು ಅದನ್ನು ಅತಿಯಾಗಿ ಪ್ರೀತಿಸಿ, ಉಡಿಸಿ, ಪೋಷಿಸಿ, ಅಲಂಕರಿಸಿ ಬಹಳ ಪ್ರೀತಿಯಿಂದ ಸಲಹುತ್ತೇವೆ. ಆದರೆ ಈ ದೇಹವು ಒಂದು ದಿನ ಸತ್ತು, ಕೊಳೆತು ಹುಳ ತಿಂದು ಹೋಗುವಂಥಾದ್ದು. ಆದರೆ ನಮ್ಮ ಪ್ರಾಣಗಳು ನಿತ್ಯಕ್ಕೂ ಜೀವಿಸುವವುಗಳು. ಅವುಗಳು ಒಂದು ದಿನ ದೇವರ ನ್ಯಾಯಾಸನದ ಮುಂದೆ ನಿಲ್ಲಬೇಕಾಗಿದೆ.

ಪಾಪಿಯು ದೇವರ ಸುವಾರ್ತೆಗೆ ಮನಸ್ಸುಕೊಟ್ಟು, ದೇವರ ಪ್ರೀತಿಗೆ ತನ್ನ ಹೃದಯವನ್ನು ತೆರೆದುಕೊಡಲು ಪ್ರಾರಂಭಿಸುವುದನ್ನು ಇಲ್ಲಿ ನೋಡುತ್ತೇವೆ. ಆಗ ಪಾಪದಿಂದ ತುಂಬಿ ಕತ್ತಲಾದ ಹೃದಯದೊಳಗೆ ದೇವರಾತ್ಮನು ಹೊಳೆಯಲು ಪ್ರಾರಂಭಿಸುತ್ತಾನೆ. ಹೀಗೆ ದೇವರ ಬೆಳಕು, ಅಂಧಕಾರವನ್ನು ಓಡಿಸುವುದಕ್ಕಾಗಿ ಆತನ ಆಲಯದೊಳಗೆ ಪ್ರವೇಶಿಸುತ್ತದೆ. ದೇವರ ಬೆಳಕು ಒಳಗೆ ಬಂದಾಗ ಅಂಧಕಾರವು ಅಲ್ಲಿರಲು ಸಾಧ್ಯವಿಲ್ಲ. ಅಲ್ಲದೆ, ವಿವಿಧ ಪ್ರಾಣಿಗಳಿಂದ ಚಿತ್ರಿಸಲ್ಪಟ್ಟ ಪಾಪವು ಸಹಾ ಹೊರಗೆ ಓಡಲೇಬೇಕು. ಆದುದರಿಂದ ಪ್ರಿಯ ವಾಚಕನೇ, ಲೋಕದ ಬೆಳಕಾಗಿರುವ ಯೇಸು ಕ್ರಿಸ್ತನನ್ನು ನಿನ್ನ ಹೃದಯದೊಳಗೆ ಪ್ರವೇಶಿಸಲು ಬಿಡು. ಆಗ, ಇಲ್ಲಿ ಚಿತ್ರಿಸಲ್ಪಟ್ಟಂತೆ ಎಲ್ಲಾ ಅಂಧಕಾರವೂ, ಕತ್ತಲೆಯ ಸಕಲ ಕಾರ್ಯಗಳೂ ನಿನ್ನ ಹೃದಯವನ್ನು ಬಿಟ್ಟು ಅಗಲುತ್ತವೆ. ಯೇಸುಕ್ರಿಸ್ತನು ಇಂತೆನ್ನುತ್ತಾನೆ—"ನಾನೇ ಲೋಕಕ್ಕೆ ಬೆಳಕು, ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು"(ಯೋಹಾನ 8:12)ನಿನ್ನ ಸ್ವಂತ ಪ್ರಯತ್ನ, ನಿನ್ನ ಜ್ಞಾನ ಅಥವಾ ಇತರರ ಜ್ಞಾನವನ್ನು ಉಪಯೋಗಿಸಿ ನೀನು ನಿನ್ನ ಹೃದಯದ ಅಂಧಕಾರವನ್ನು ಎಂದಿಗೂ ಓಡಿಸಲಾರಿ. ಆದರೆ, ನಿಜ ಬೆಳಕಾದ ಯೇಸುಕ್ರಿಸ್ತನು, ನಿನ್ನ ಹೃದಯವನ್ನು ಪ್ರವೇಶಿಸುವಂತೆ, ಅದನ್ನು ತೆರೆದುಕೊಡುವುದೇ ಅತೀ ಸರಳವಾದ, ಫಲಕಾರಿಯಾದ ಹಾಗೂ ಪೂರ್ಣ ಸಾಧಕವಾದ ಮಾರ್ಗವಾಗಿದೆ. ಆಗ ಪಾಪವೆಂಬ ಕತ್ತಲು ನಿವಾರಿಸಲ್ಪಡುತ್ತದೆ. ಕಗ್ಗತ್ತಲಿನ ರಾತ್ರಿಯಲ್ಲಿ ಚಂದ್ರ, ನಕ್ಷತ್ರಗಳು ಸ್ವಲ್ಪ ಬೆಳಕನ್ನು ಕೊಡಬಹುದು. ಆದರೆ ಸೂರ್ಯನು ಮೂಡಿದಾಗ ಎಲ್ಲಾ ಅಂಧಕಾರವೂ, ಇತರ ಸಣ್ಣ ಬೆಳಕುಗಳೂ ಕಾಣದೆ ಹೋಗುತ್ತವೆ. ಯೇಸುಕ್ರಿಸ್ತನು ನೀತಿ ಸೂರ್ಯನಾಗಿ

Copyright ANCP

ದ್ದಾನೆ. ಯೇಸು ಅಂದು ದೇವಾಲಯವನ್ನು ಪ್ರವೇಶಿಸಿದಾಗ, ಅಲ್ಲಿ ಎತ್ತು, ಕುರಿ, ಪಾರಿವಾಳ ಮುಂತಾದವುಗಳನ್ನು ಮಾರುವವರನ್ನು ಹೊರಗೆ ಓಡಿಸಿ, ಚಿನಿವಾರರ ಮೇಜುಗಳನ್ನು ಕೆಡವಿ, ಅವರ ಹಣವನ್ನು ಚೆಲ್ಲಿ, "ನನ್ನ ಆಲಯವು ಪ್ರಾರ್ಥನಾಲಯವೆನಿಸಿಕೊಳ್ಳುವುದು ಎಂದು ಬರೆದದೆ. ಆದರೆ ನೀವು ಅದನ್ನು ಕಳ್ಳರ ಗವಿ ಮಾಡುತ್ತೀರಿ" ಎಂದು ಹೇಳಿದನಂ (ಮತ್ತಾಯ 21:13). ನಿನ್ನ ಹೃದಯವು ದೇವರ ವಾಸಸ್ಥಳವಾಗಲೂ, ದೇವರ ಆಲಯ ವಾಗಲೂ ನೇಮಕವಾದದ್ದು. ಅದರಲ್ಲಿ ವಾಸಿಸಿ, ಅದನ್ನಲಂಕರಿಸಿ ಬೆಳಕು, ಸಂತೋಷ ಮುಂತಾದವುಗಳಿಂದ ಅದನ್ನು ತುಂಬಿಸಬೇಕೆಂದು ದೇವರು ಅಪೇಕ್ಷಿಸುತ್ತಾನೆ. ಯೇಸು ಕ್ರಿಸ್ತನು ನಮ್ಮ ಪಾಪಗಳನ್ನು ನಿವಾರಿಸುವುದಕ್ಕಾಗಿ ಮಾತ್ರವಲ್ಲ, ನಮ್ಮನ್ನು ಪಾಪದ ಬಲದಿಂದಲೂ ಅದರ ಅಧಿಕಾರದಿಂದಲೂ ಬಿಡುಗಡೆಗೊಳಿಸಿ, ನಮ್ಮನ್ನು ಸ್ವತಂತ್ರರನ್ನಾಗಿ ಮಾಡಲು ಬಂದನು. "ಆದುದರಿಂದ ಮಗನು (ಯೇಸುವು) ನಮ್ಮನ್ನು ಬಿಡುಗಡೆ ಮಾಡಿದರೆ. ನಿಜವಾಗಿ ನಿಮಗೆ ಬಿಡುಗಡೆಯಾಗುವುದು" (ಯೋಹಾನ 8:36).


### ಮೂರನೆಯ ಚಿತ್ರವು— **ಮಾನಸಾಂತರಪಟ್ಟ ಹೃದಯ**

ನಿಜ ಮಾನಸಾಂತರಪಟ್ಟವನ ಹೃದಯದ ಸ್ಥಿತಿಯನ್ನು ಈ ಚಿತ್ರವು ತೋರಿಸುತ್ತದೆ. ಆತನು ತನ್ನ ಪಾಪ ಅಪರಾಧಗಳು ಎಷ್ಟು ಅಗಾಧವೂ ಭಯಂಕರವಾದವೂ ಆಗಿದೆ. ಎಂಬುದನ್ನೂ, ಯೇಸುಕ್ರಿಸ್ತನು ಅವುಗಳಿಗಾಗಿ ಪ್ರಾಣಕೊಟ್ಟನೆಂದೂ, ಈಗ ಗ್ರಹಿಸಿ ತಿಳಿದುಕೊಂಡಿದ್ದಾನೆ. ದೇವರ ವಾಕ್ಯವೆಂಬ ದೂತನು ಅವನಿಗೆ ಪ್ರಕಟಿಸುವ ಆ ಕ್ರೂಜೆಯನ್ನು ಅವನು ದೃಷ್ಟಿಸಿದಂತೆ, ಈಗ ಆತನಲ್ಲಿರುವ ಆ ನಿಜ ಮಾನಸಾಂತರದಿಂದ ಕೂಡಿದ ಹೃದಯವು, ಆ ಕ್ರೂಜೆಯೆದುರಿನಲ್ಲಿ ಮುರಿದು ಬೀಳುತ್ತದೆ. ತನ್ನ ಪಾಪರಾಶಿಯ ವಿಷಯದಲ್ಲಿ ಹೃದಯಪೂರ್ವಕವಾದ ಪಶ್ಚಾತ್ತಾಪವೂ, ಅದರ ಕಡೆಗೆ ತಿರಸ್ಕಾರವೂ. ಆಳವಾದ ದುಃಖವೂ ಆತನಿಗುಂಟಾಗುತ್ತದೆ. ಯೇಸುಕ್ರಿಸ್ತನಲ್ಲಿ ಪ್ರಕಟವಾದ ದೇವರ ಅಪಾರವಾದ ಪ್ರೀತಿಯನ್ನು ಕಾಣುವಾಗ, ಅದರಲ್ಲೂ, ದೇವಕುಮಾರನಾದ ಯೇಸು ಕ್ರಿಸ್ತನು ತನ್ನ ಎಲ್ಲಾ ಪಾಪಗಳನ್ನು ನಿವಾರಿಸುವುದಕ್ಕಾಗಿ ಬಂದನೆಂಬುದನ್ನೂ, ಆತನು ತನ್ನ ಬದಲಾಗಿ ಶಾಪಗ್ರಸ್ತರಿಗೆ ನೇಮಕವಾದ ಈ ಮರದ ಕಂಬದಲ್ಲಿ ಸಾಯಲು ಸಿದ್ಧನಾದನೆಂಬುವ ಸತ್ಯಾಂಶವನ್ನೂ ಆತನು ಗ್ರಹಿಸುವಾಗ, ದೇವರ ಆ ಪ್ರೀತಿಯು ಆತನ ಹೃದಯವನ್ನು ಕರಗಿಸುತ್ತದೆ.

ಯೇಸುಕ್ರಿಸ್ತನಿಗೆ ಅಪಹಾಸ್ಯ ಮಾಡಿ, ಮುಳ್ಳಿನ ಕಿರೀಟವನ್ನಿಟ್ಟು ಕ್ರೂರವಾದ ಮೊಳೆಗಳನ್ನು ಆತನ ಕೈ, ಕಾಲುಗಳಿಗೆ ಜಡಿದರು. ಮಾನಸಾಂತರ ಹೊಂದುತ್ತಿರುವ ಪಾಪಿಯ ಹೃದಯದಲ್ಲಿ ಈ ಬಾಧೆಗಳ ನಿಜ ದರ್ಶನವುಂಟಾಗಿ, ಆತನ ಹೃದಯದಲ್ಲೂ, ಜೀವಿತದಲ್ಲೂ ಅಪಾರವಾದ ಪರಿವರ್ತನೆಯುಂಟಾಗುತ್ತದೆ. ದೇವರ ವಾಕ್ಯವನ್ನು ಓದು

Copyright ANGP

## ಮೂರನೆಯ ಚಿತ್ರವು




ವಾಗೆಲ್ಲ ಅವನಿಗೆ ತನ್ನ ನಿಜ ಸ್ಥಿತಿಯನ್ನೇ ದರ್ಪಣದಲ್ಲಿ ಕಂಡಂತೆ ಆಗುತ್ತದೆ. ಆಗ ತಾನು ದೇವರ ಅಪ್ಪಣೆಗಳನ್ನು ಉಲ್ಲಂಘಿಸಿ, ಆತನಿಂದ ಎಷ್ಟು ದೂರಕ್ಕೆ ಜಾರಿ ಹೋಗಿದ್ದೇನೆ ಎಂಬ ಅರಿವು ಆತನಲ್ಲಿ ಉಂಟಾಗುತ್ತದೆ. ಹೀಗೆ ಆತನು ದುಃಖ ಭಾರದಿಂದ ಅಳುತ್ತಾ, ಕಣ್ಣೀರಿನೊಡನೆ ತನ್ನ ಹೃದಯವನ್ನು ದೇವರ ಮುಂದೆ ತೆರೆದು, ಎಲ್ಲವನ್ನೂ ದೇವರಲ್ಲಿ ಅರಿಕೆ ಮಾಡುವಾಗ, ಯೇಸುಕ್ರಿಸ್ತನು ಆತನ ಸಮೀಪಕ್ಕೆ ಬರುತ್ತಾನೆ. "ದೇವರ ಕುಮಾರನಾದ ಯೇಸು

ಕ್ರಿಸ್ತನ ರಕ್ತವು ನಮ್ಮನ್ನು ಸಮಸ್ತ ಪಾಪಗಳಿಂದ ಶುದ್ಧಿಗೊಳಿಸುತ್ತದೆ" (1 ಯೋಹಾನ. 1: 17) ಎಂಬ ಸತ್ಯವಾಕ್ಯವನ್ನು ಆತನು ಗ್ರಹಿಸುವಾಗ, ದೇವರ ಸಮಾಧಾನವೂ ಪ್ರೀತಿಯೂ ಆತನ ಹೃದಯವನ್ನು ಪ್ರವೇಶಿಸುತ್ತದೆ. "ಮುರಿದ ಮನಸ್ಸುಳ್ಳವರಿಗೆ ದೇವರು ಸಮೀಪವಾಗಿದ್ದಾನೆ. ಕುಗ್ಗಿಹೋದವರನ್ನು ರಕ್ಷಿಸುತ್ತಾನೆ" (ಕೀರ್ತನೆ 34:18). "ನಾನು ಕಟಾಕ್ಷಿಸುವವನು ಎಂಥವನೆಂದರೆ, ದೀನನೂ, ಮನಮುರಿದವನೂ, ನನ್ನ ಮಾತಿಗೆ ಭಯಪಡುವವನೂ ಆಗಿರುವವನೇ." (ಯೆಶಾಯ 66:2) ಹೀಗೆ, "ಮಗನೇ (ಮಗಳೇ) ಅಂಜಬೇಡ, ನಿನ್ನ ಪಾಪಗಳು ನಿನಗೆ ಕ್ಷಮಿಸಲ್ಪಟ್ಟಿವೆ" ಎಂದು ಹೇಳಲ್ಪಟ್ಟ ಯೇಸುಸ್ವಾಮಿಯ ಮಾತನ್ನು ಪರಿಶುದ್ಧಾತ್ಮನು ಅವನ ಹೃದಯದಲ್ಲಿ ಮೆಲ್ಲನೆ ತಿಳಿಸುತ್ತಾನೆ. ಇನ್ನು ಆತನು ಕ್ರೂಜೆಯನ್ನೂ ಅದರಲ್ಲಿ ಸುರಿಸಲ್ಪಟ್ಟ ರಕ್ತವನ್ನೂ ದೃಷ್ಟಿಸುತ್ತಾ ಅವೆಲ್ಲವೂ ತನಗಾಗಿಯೇ ಮಾಡಲ್ಪಟ್ಟಿತೆಂದೂ ನಂಬುತ್ತಾ ಮುಂದುವರಿಯುವಾಗ, ತನ್ನ ಪಾಪದ ಹೊರೆಯು ಅದರಲ್ಲಿ ನಿವಾರಿಸಲ್ಪಟ್ಟಿದೆ ಎಂಬುದನ್ನು ಗ್ರಹಿಸಿಕೊಳ್ಳುತ್ತಾನೆ. ಏಕೆಂದರೆ, ಯೇಸುಕ್ರಿಸ್ತನು ನಮ್ಮ ಎಲ್ಲಾ ಪಾಪದ ಭಾರವನ್ನು ಹೊತ್ತುಕೊಂಡು ಹೋದನು. "ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು. ನಮ್ಮೆಲ್ಲರ ದೋಷ ಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು"(ಯೆಶಾ. 53).

ಹೀಗೆ ಶುದ್ಧೀಕರಿಸಲ್ಪಟ್ಟ ಹೃದಯವನ್ನು ಪವಿತ್ರಾತ್ಮನೂ, ದೇವರ ಪ್ರೀತಿಯೂ ತುಂಬುವವು. ಆತನು ನಂಬಿಕೆಯಿಂದ ಕ್ರೂಜೆಯನ್ನೂ ಯೇಸುಕ್ರಿಸ್ತನನ್ನೂ ದೃಷ್ಟಿಸಿದಂತೆ, ತನ್ನ ಪಾಪವೆಲ್ಲವೂ ಕ್ಷಮಿಸಲ್ಪಟ್ಟಿವೆ ಎಂದಂ ಆತನು ಗ್ರಹಿಸಿಕೊಳ್ಳುತ್ತಾನೆ. ದೇವರ ಮಗನಾದ ಯೇಸುವಿನ ರಕ್ತವು ಆತನ ಸಕಲ ಪಾಪಪನ್ನು ನಿವಾರಣೆ ಮಾಡಿ ತನ್ನನ್ನು ಶುದ್ಧ ಮಾಡಿರುತ್ತದೆ ಎಂಬ ದೃಢ ನಿಶ್ಚಯತ್ವವನ್ನು ಆತನು ಪಡೆಯುತ್ತಾನೆ. (1 ಯೋಹಾನ 1:7)"ಯೇಸುವನ್ನುನಂಬುವವನು ನಾಶವಾಗದೆ ನಿತ್ಯಜೀವವನ್ನು ಹೊಂದಿದ್ದಾನೆ."(ಯೋಹಾನ3:16) ಎಂಬ ನಿಶ್ಚಯತ್ವವನ್ನು ಆತನು ಹೊಂದುತ್ತಾನೆ. ಏಕೆಂದರೆ "ಆತನ ಕೃಪಾತಿಶಯಕ್ಕನುಸಾರವಾಗಿ, ಆತನ ರಕ್ತದ ಮೂಲಕ ಯೇಸುಕ್ರಿಸ್ತನಲ್ಲಿ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು." (ಎಫೆಸ 1:7) ಮೊದಲಿದ್ದ ಪಾಪಮಯ ದುರಾಶೆಗಳ ಬದಲಾಗಿ, ತನ್ನನ್ನು ಮೊದಲು ಪ್ರೀತಿಸಿದ ದೇವರಿಗಾಗಿ ಬದುಕಬೇಕು, ಆತನ ಸೇವೆ ಮಾಡಬೇಕು ಎಂಬ ಆಳವಾದ ಆಶೆಯು ಆತನ ಹೃದಯವನ್ನು ತುಂಬುತ್ತದೆ. ಲೋಕವನ್ನೂ ಲೋಕದ ವಿಷಯಗಳನ್ನೂ ಪ್ರೀತಿಸುವುದರ ಬದಲು ಆತನು ಈಗ ದೇವರನ್ನೂ ಆತನ ವಿಷಯಗಳನ್ನೂ ಪ್ರೀತಿಸುತ್ತಾನೆ.

ಹೀಗಾಗಿ, ಈ ಚಿತ್ರದಲ್ಲಿ, ಪಾಪಗಳನ್ನು ಸೂಚಿಸುವ ವಿವಿಧ ಪ್ರಾಣಿಗಳು ಈಗ ಹೃದಯದ ಹೊರಗೆ ಇರುತ್ತವೆ. ತನ್ನ ಮೊದಲಿನ ವಾಸಸ್ಥಳವನ್ನೇ ಬಿಟ್ಟು ಹೋಗಲು ಮನಸ್ಸಿಲ್ಲದೆ, ಸೈತಾನನು, ತನಗೆ ಮತ್ತೊಮ್ಮೆ ಪ್ರವೇಶವು ದೊರಕಬಹುದೆಂಬ ನಿರೀಕ್ಷೆ

Copyright ANGP

ಯಿಂದ ಹಿಂದಕ್ಕೆ ನೋಡುತ್ತಿದ್ದಾನೆ. ಆದುದರಿಂದಲೇ, "ಪ್ರಾರ್ಥಿಸುತ್ತಾ ಎಚ್ಚರವಾಗಿರಿ" ಎಂತಲೂ, "ಸೈತಾನನನ್ನು ಎದುರಿಸಿರಿ, ಆಗ ಆತನು ನಿಮ್ಮನ್ನು ಬಿಟ್ಟು ಓಡಿಹೋಗುವನು" ಎಂದೂ ಯೇಸುಕ್ರಿಸ್ತನು ಎಚ್ಚರಿಸುತ್ತಾನೆ.


ನಮ್ಮ ಪ್ರಭುವೂ ರಕ್ಷಕನೂ ಆದ ಕ್ರಿಸ್ತನು ಮಾಡಿದ ಸ್ವಂತ ಅರ್ಪಣೆಯ ದಿವ್ಯ ಯಜ್ಞದ ಮೂಲಕ ಪೂರ್ಣ ಸಮಾಧಾನವನ್ನೂ ಬಿಡುಗಡೆಯನ್ನೂ ಪಡಕೊಂಡ ಕ್ರೈಸ್ತನ ಜೀವಿತವು ಇಲ್ಲಿ ಚಿತ್ರಿಸಲ್ಪಟ್ಟಿದೆ. ಆದುದರಿಂದ, ಈತನು ಇನ್ನು "ಯೇಸುಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಇನ್ನಾವದರಲ್ಲೂ ಹೆಚ್ಚಳ ಪಡುವುದಿಲ್ಲ." ಕ್ರಿಸ್ತನ ಮೂಲಕ ಲೋಕವು ಶಿಲುಬೆಗೆ ಹಾಕಿಸಿಕೊಂಡು ಆತನ ಪಾಲಿಗೆ ಸತ್ತಿತು. ಆತನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತನು (ಗಲಾತ್ಯ 6:14). ನಾವು ಸಹಾ "ಪಾಪದ ಪಾಲಿಗೆ ಸತ್ತು ನೀತಿವಂತರಾಗಿಯೂ ಲೋಕದ ಪಾಲಿಗೆ ಶಿಲುಬೆಗೆ ಹಾಕಿಸಿಕೊಂಡವರಾಗಿಯೂ ಜೀವಿಸುವಂತೆ" (1 ಪೇತ್ರ 2:24) ಯೇಸುಕ್ರಿಸ್ತನು ಕ್ರೂಜೆಯಲ್ಲಿ ಸತ್ತನು. ಆದುದರಿಂದ, ನಾವು "ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳುವಂತೆಯೂ ಶರೀರಭಾವದ ಅಭಿಲಾಷೆಗಳನ್ನು ನೆರವೇರಿಸದೆ ಜೀವಿಸುವಂತೆಯೂ" (ಗಲಾತ್ಯ 5:16, 25) ಆಜ್ಞಾಪಿಸಲ್ಪಟ್ಟವರಾಗಿದ್ದೇವೆ.

### ನಾಲ್ಕನೆಯ ಚಿತ್ರವು

ಯೇಸುವಿನ ವಸ್ತ್ರಗಳನ್ನು ಬಿಚ್ಚಿ ತೆಗೆದ ನಂತರ, ಆತನನ್ನು ಜಡಿದ ಆ ಮರದ ಕಂಬವೂ, ಆತನನ್ನು ಕ್ರೂರವಾಗಿ ಹೊಡೆದ ಕೊರಡೆಗಳೂ ಈ ಚಿತ್ರದಲ್ಲಿರುತ್ತವೆ. ಆತನು ನಮ್ಮ ಪಾಪಗಳಿಗೋಸ್ಕರ ದಂಡನೆಯನ್ನು ಅನುಭವಿಸಿದನು. "ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು." ಹೆರೋದನೂ ಆತನ ಪ್ರಜೆಗಳೂ ಯೇಸುವಿಗೆ ಹಾಸ್ಯಮಾಡಿ, ಕೊರಡೆಗಳಿಂದ ಹೊಡೆದರು. ನಂತರ ಆತನಿಗೆ ಒಂದು ಚಿನ್ನದ ಕಿರೀಟವನ್ನಿರಿಸುವುದರ ಬದಲು ಒಂದು ಮುಳ್ಳಿನ ಕಿರೀಟವನ್ನು ಆತನ ತಲೆಗಿರಿಸಿ ಒತ್ತಿದರು. ಆತನ ಬಲಕೈಯಲ್ಲಿ ರಾಜದಂಡವನ್ನು ಕೊಡುವುದರ ಬದಲು ಒಂದು ಕೋಲನ್ನು ಕೊಟ್ಟರು. ಆತನ ಎದುರು ಅಡ್ಡಬಿದ್ದು "ಯೆಹೂದ್ಯರ ಅರಸನೇ ನಿನಗೆ ನಮಸ್ಕಾರ" ಎಂದು ಪರಿಹಾಸ್ಯ ಮಾಡಿದರು. ಆತನ ಮುಖದ ಮೇಲೆ ಉಗುಳಿ ಆತನ ಕೈಯಿಂದ ಬೆತ್ತವನ್ನು ಕಸಿದುಕೊಂಡು ಅದರಿಂದ ಆತನ ತಲೆಗೆ ಹೊಡೆದರು. ಈ ರೀತಿ ಆತನನ್ನು ಅತೀ ಹೀನವಾಗಿ ಕ್ರೂರ ಹೃದಯದಿಂದ ಹಾಸ್ಯ ಮಾಡಿದ ಬಳಿಕ ಕ್ರೂಜೆಗೆ ಹಾಕುವುದಕ್ಕಾಗಿ ಆತನನ್ನು ತೆಗೆದುಕೊಂಡು ಹೋದರು.

ಈಗ ಅನೇಕರು ಕ್ರೈಸ್ತರೆನಿಸಿಕೊಂಡು, ದೇವಾಲಯಗಳಲ್ಲಿ ಪ್ರಾರ್ಥನೆ, ಪವಿತ್ರ ರಾತ್ರಿ ಭೋಜನ, ದೇವರ ಸ್ತೋತ್ರ, ಗಾನ ಮೊದಲಾದುವುಗಳಲ್ಲಿ ಪಾಲು ತೆಗೆದುಕೊಳ್ಳುತ್ತಾರೆ. ಆದರೆ, ತಮ್ಮ ದುಷ್ಕೃತ್ಯಗಳಿಂದ ರಕ್ಷಕನನ್ನು ಪುನಃ ಶಿಲುಬೆಗೆ ಜಡಿಯು

Copyright ANCF





ಕ್ರಿಸ್ತನೊಡನೆ ಕ್ರೂಜಿತವಾದ ಹೃದಯು

ತ್ತಾರೆ. "ನನ್ನನ್ನು ಸ್ವಾಮಿ ಸ್ವಾಮಿ ಅನ್ನುವವರೆಲ್ಲರೂ ಪರಲೋಕ ರಾಜ್ಯದಲ್ಲಿ ಸೇರುವು ದಿಲ್ಲ. ಆದರೆ, ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ದೇವರ ರಾಜ್ಯಕ್ಕೆ ಸೇರುವನು" ಎಂದು ಯೇಸು ಅಂದಿರುತ್ತಾನೆ.(ಮತ್ತಾಯ 7:21-27)

ಯೂದನ ಹೃದಯವನ್ನು ಹಣದಾಸೆಯು ಸಂಪೂರ್ಣ ಗೆದ್ದುಕೊಂಡು ಆತನ ಬುದ್ಧಿ ಯನ್ನು ಕುರುಡು ಮಾಡಿದುದರಿಂದ ಆತನು ತನ್ನ ಗುರುವನ್ನು ವೈರಿಗಳಿಗೆ ಒಪ್ಪಿಸಿಕೊಟ್ಟು ಮೂವತ್ತು ರೂಪಾಯಿಗೆ ಮಾರಿದನು. ಆ ಹಣದ ಚೀಲವು ಈ ಚಿತ್ರದಲ್ಲಿದೆ. ರಾತ್ರಿ ಯಲ್ಲಿ ಆತನನ್ನು ಹಿಡಿದ ಸಿಪಾಯಿಗಳ ದೀವಟಿಗೆಗಳೂ ಸರಪಳಿಗಳೂ ಇಲ್ಲಿ ಚಿತ್ರಿಸಲ್ಪ ಟ್ಟಿದೆ. ಜುಗಾರಿಯಾಡಲು ಉಪಯೋಗಿಸುವ ಕವಡೆಯನ್ನು ಅವರು ಆತನ ಅಂಗಿ ಗೋಸ್ಕರ ಚೀಟು ಹಾಕಲು ಉಪಯೋಗಿಸಿದರು. ಹೀಗೆ ಅವರು "ನನ್ನ ಮೇಲ್ಹೊದಿಕೆ ಯನ್ನು ತಮ್ಮಲ್ಲಿ ಪಾಲು ಮಾಡಿಕೊಳ್ಳುತ್ತಾರೆ, ನನ್ನ ಅಂಗಿಗೋಸ್ಕರ ಚೀಟು ಹಾಕು ತ್ತಾರೆ" (ಕೀರ್ತನೆ 22:18) ಎಂಬ ಪ್ರವಾದನಾ ವಾಕ ವನ್ನು ಪೂರ್ತಿಗೊಳಿಸಿದರು. ಇನ್ನು

ಯೇಸುಕ್ರಿಸ್ತನಿಂದ ಎಲ್ಲವನ್ನೂ ಅವರು ತೆಗೆದುಕೊಂಡು, "ಈ ಮನುಷ್ಯನು ನಮ್ಮ ಮೇಲೆ ದೊರೆತನ ಮಾಡುವುದು ಬೇಡ" ಎಂದು ಹೇಳಿ, ಆತನನ್ನು ತಿರಸ್ಕರಿಸಿಬಿಟ್ಟರು.

ದೇವರಿಂದ ಮಳೆ, ಮುಂತಾದ ಎಲ್ಲಾ ಅನುಗ್ರಹವನ್ನು ಪಡೆದುಕೊಳ್ಳಬೇಕೆಂಬ ಹಂಬಲವು ಎಲ್ಲಾ ಮನುಷ್ಯರಲ್ಲಿರುತ್ತದೆ. ಆದರೆ ಆತನ ಪರಿಪೂರ್ಣ ಅಧಿಕಾರಕ್ಕೆ ತಮ್ಮನ್ನು ಒಳಪಡಿಸಿಕೊಳ್ಳಲು ಅವರು ಸಿದ್ಧರಿರುವುದಿಲ್ಲ. ಅನೇಕರಿಗೆ, ತಮ್ಮ ಕಷ್ಟ ಇಕ್ಕಟ್ಟುಗಳ ಕಾಲದಲ್ಲಿ ಮಾತ್ರ ಆತನ ಸಹಾಯವು ದೊರೆತರೆ ಸಾಕೆನಿಸುತ್ತದೆ.




ದೇವರ ವಾಸಸ್ಥಾನಕ್ಕೆ ಯೋಗ್ಯವಾದ ಹೃದಯ

ಸಿಪಾಯಿಗಳು ಈಟಿಯಿಂದ ಯೇಸುವಿನ ಪಕ್ಕೆಯನ್ನು ತಿವಿದರು. ಆಗ "ಕೂಡಲೇ ರಕ್ತವೂ ನೀರೂ ಹೊರಟಿತು" (ಯೋಹಾನ 19:33-37). ಕೋಳಿ ಕೂಗುವುದಕ್ಕೆ

ಮುಂಚೆ "ಆತನನ್ನು ಅರಿಯೆನು" ಎಂದು ಪೇತ್ರನು ಅಲ್ಲಗಳೆದನು. ಆದರೆ ಸ್ವಲ್ಪ ಸಮಯದ ನಂತರ ಮನೋವ್ಯಥೆಯ ಕಣ್ಣೀರಿನೊಡನೆ ಪಶ್ಚಾತ್ತಾಪಪಟ್ಟನು. ನೀನಾದರೋ ನಿನ್ನ ನಡತೆ, ಮಾತು ಇವುಗಳಿಂದ ಕ್ರಿಸ್ತನಿಗೆ ಸಾಕ್ಷಿ ಕೊಡುತ್ತಿರುವಿಯೋ? ಇಲ್ಲವೇ ಮನುಷ್ಯರ ಮುಂದೆ ನಾಚಿಕೊಳ್ಳುತ್ತಿಯೋ? "ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ ನಾನು ಸಹಾ ಅವನನ್ನು ನನ್ನವನೆಂದು, ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು. ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನಲ್ಲವೆಂದು ಹೇಳುವನೋ ಅವನನ್ನು ನಾನು ಸಹಾ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು" (ಮತ್ತಾಯ 10:32:33) ಎಂದು ಯೇಸುವು ಹೇಳಿದ್ದಾನೆ. "ಯಾವನಾದರೂ ತನ್ನ ಶಿಲುಬೆಯನ್ನು ತೆಗೆದುಕೊಂಡು ನನ್ನ ಹಿಂದೆ ಬಂದ ಹೊರತು ನನಗೆ ಯೋಗ್ಯನಲ್ಲ"(ಮತ್ತಾಯ 10:39). ಯೇಸುಕ್ರಿಸ್ತನೆಂಬ ಸ್ಥಿರವಾದ ಬಂಡೆಯ ಮೇಲೆ ನಿಲ್ಲುವವರು ಧನ್ಯರು.

ದೇವರ ಅಪಾರವಾದ ಕೃಪಾಕರುಣೆಗಳಿಂದ ರಕ್ಷಿಸಲ್ಪಟ್ಟು ತೊಳೆದು ಶುದ್ಧೀಕರಣ ಹೊಂದಿದ ಹೃದಯವು ಇಲ್ಲಿ ಚಿತ್ರಿಸಲ್ಪಟ್ಟಿದೆ. ಈ ಹೃದಯವು ಈಗ, ಯೇಸುಕ್ರಿಸ್ತನ ವಾಗ್ದಾನಕ್ಕೆ ಅನುಸಾರವಾಗಿ ತಂದೆ, ಮಗ, ಪರಿಶುದ್ಧಾತ್ಮನಾಗಿರುವ ದೇವರ ನಿಜ ಆಲಯವೂ, ನಿವಾಸ ಸ್ಥಳವೂ ಆಗಿರುತ್ತದೆ. ಯೇಸುವಿನ ವಾಗ್ದಾನವೇನೆಂದರೆ, "ಯಾವನಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು. ಅವನನ್ನು ನನ್ನ ತಂದೆಯು ಪ್ರೀತಿಸುವನು. ಮತ್ತು ನಾವಿಬ್ಬರು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು."(ಯೋಹಾನ 14:32) ಯೇಸುಕ್ರಿಸ್ತನ ಮೂಲಕ ಮಾತ್ರವೇ ದೇವರು ಮನುಷ್ಯನನ್ನು ಸನ್ಮಾನಿಸಿ ಆಶೀರ್ವದಿಸಿ ವೃದ್ಧಿಗೊಳಿಸುತ್ತಾನೆ. (ಲೂಕ 1:52)

ಈಗ ಈ ಹೃದಯವು ದೇವರ ನಿಜ ಆಲಯವಾಗುತ್ತದೆ. ಅದರೊಳಗಿನ ಪಾಪವು ಹೊರಗೆ ಓಡಿಸಲ್ಪಟ್ಟಿರುತ್ತದೆ. ಸುಳ್ಳಿಗೆ ಮೂಲ ತಂದೆಯಾಗಿರುವ ಸೈತಾನನಿಂದ ನಿಯಂತ್ರಿಸಲ್ಪಟ್ಟ ವಿವಿಧ ಪ್ರಾಣಿಗಳ ಬದಲು ಸತ್ಯದ ಆತ್ಮನಾಗಿರುವ ಪವಿತ್ರಾತ್ಮನು ತಾನೇ ಅಲ್ಲಿ ನೆಲೆಗೊಂಡಿರುವುದನ್ನು ಕಾಣುತ್ತೇವೆ. ಪಾಪದ ಅತೀ ಭಯಂಕರವಾದ ನೆಲೆಯಾಗಿರುವುದರ ಬದಲು, ಈಗ ಈ ಹೃದಯವು ಅತೀ ರಮ್ಯವಾದ, ಹಾಗೂ ಫಲಭರಿತವಾದ ವೃಕ್ಷ ಇಲ್ಲವೇ ತೋಟದಂತಿರುತ್ತದೆ. ಅದು ದೇವರಿಗೂ ಮನುಷ್ಯರಿಗೂ ಮೆಚ್ಚಿಕೆಯಾಗಿರುವ ಪ್ರೀತಿ, ಸಂತೋಷ, ಸಮಾಧಾನ, ದೀರ್ಘ ಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ ಮುಂತಾದ ಪವಿತ್ರಾತ್ಮನಿಂದುಂಟಾಗುವ ಫಲಗಳನ್ನು ಫಲಿಸುತ್ತದೆ. ಹೀಗೆ ಆತನು, "ನಿಜವಾದ ದ್ರಾಕ್ಷೆಬಳ್ಳಿ"ಯಾಗಿರುವ ಯೇಸುಕ್ರಿಸ್ತನ ಫಲವನ್ನು ಕೊಡುವ ಕೊಂಬೆಯಾಗಿದ್ದಾನೆ. ಕ್ರಿಸ್ತನೂ ಕ್ರಿಸ್ತನ ವಾಕ್ಯಗಳೂ ಆತನ ಹೃದಯದಲ್ಲಿ ನೆಲೆಗೊಂಡಿರುತ್ತವೆ. (ಯೋಹಾನ 15:10) ಇದೇ ಆತನ ಫಲಭರಿತವಾದ ಜೀವನದ

Copyright ANCP

ರಹಸ್ಯವಾಗಿರುತ್ತದೆ. ಆತನು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿ ಪವಿತ್ರಾತ್ಮ ಭರಿತನಾಗಿರುವುದರಿಂದಲೂ, ಈಗ ಶರೀರದ ದುರಾಶೆಗಳನ್ನು ಜಯಿಸುವುದಕ್ಕೂ, ಆ 'ಹಳೇ ಸ್ವಭಾವವನ್ನು ಶಿಲುಬೆಗೆ ಹಾಕಿ 'ಜಯಪ್ರದವಾದ ಬಾಳ್ವೆಯನ್ನು ಮಾಡಲೂ ಆತನು ಶಕ್ತನಾಗಿದ್ದಾನೆ. ಹೀಗೆ, ಪವಿತ್ರಾತ್ಮನ ಬಲದಿಂದ ದೇವರನ್ನನುಸರಿಸಿ ನಡೆಯುವದಕ್ಕೂ ಶರೀರ ಭಾವವನ್ನು ಜಯಿಸುವುದಕ್ಕೂ ಆತನು ಶಕ್ತನಾಗಿದ್ದಾನೆ. ಇನ್ನು ಆತನು ತನ್ನ ಕಣ್ಣು, ಕಿವಿ ಮುಂತಾದ ಇಂದ್ರಿಯಗಳಿಗೆ ಗೋಚರವಾಗುವ ವಿಷಯಗಳನ್ನಾಧರಿಸಿ ಜೀವಿಸದೆ ಕೇವಲ ನಂಬಿಕೆಯಿಂದಲೇ ಜೀವಿಸುತ್ತಾನೆ. ಏಕೆಂದರೆ ಲೋಕವನ್ನು ಜಯಿಸುವಂಥಾದ್ದು ಯೇಸುಕ್ರಿಸ್ತನಲ್ಲಿಟ್ಟ ನಂಬಿಕೆಯೇ. ಹೀಗೆ ಆತನು ದೃಢವಾದ, ಜೀವಭರಿತವಾದ ನಿರೀಕ್ಷೆಯಿಂದ ಜೀವಿಸುತ್ತಾ ತ್ವರೆಪಡುತ್ತಿರುವ, ಪ್ರಭುವಾದ ಯೇಸುಕ್ರಿಸ್ತನ ಎರಡನೇ ಬರೋಣದ ಮಹಿಮೆಯ ನಿರೀಕ್ಷೆಯಿಂದ ಬಲಗೊಳಿಸಲ್ಪಡುತ್ತಾನೆ. ನಿತ್ಯಕ್ಕೂ ನೆಲೆಗೊಳ್ಳುವ ದೇವರ ಪ್ರೀತಿಯಿಂದ ಆತನು ಜೀವಿಸುತ್ತಾನೆ.

"ನಿರ್ಮಲಚಿತ್ತರು ಧನ್ಯರು. ಅವರು ದೇವರನ್ನು ನೋಡುವರು" (ಮತ್ತಾಯ 5.8). ಅರಸನಾದ ದಾವೀದನು ತನ್ನ ಜೀವಿತಕಾಲದಲ್ಲಿ ಸಕಲ ಐಶ್ವರ್ಯವನ್ನೂ ಸುತ್ತಣ ವೈರಿಗಳ ಮೇಲೆ ಜಯವನ್ನೂ ಸಂಪಾದಿಸಿಕೊಂಡನು. ಆದರೆ, ಅವೆಲ್ಲಕ್ಕಿಂತಲೂ ದೊಡ್ಡ ಹೋರಾಟವು ತನ್ನ ಹೃದಯದೊಳಗೆ ನಡೆಯುತ್ತಿದೆ ಎಂದು ಕಂಡುಕೊಂಡನು. ಹೀಗೆ ತನ್ನ ಅಂತರ್ಯದ ದೊಡ್ಡ ಕೊರತೆಯನ್ನು ಆತನು ತಿಳಿದುಕೊಂಡು, "ದೇವರೇ ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು. ನನಗೆ ಸ್ಥಿರಚಿತ್ತವನ್ನನುಗ್ರಹಿಸಿ ನನ್ನನ್ನು ನೂತನಪಡಿಸು" (ಕೀರ್ತನೆ 51:10) ಎಂದು ಪ್ರಾರ್ಥಿಸಿದನು. ಪೂರ್ಣ ಪಶ್ಚಾತ್ತಾಪದಿಂದ ದೇವರ ಸಮೀಪಕ್ಕೆ ಬರುವುದರಿಂದಲ್ಲದೆ, ಹೃದಯವನ್ನು ಶುದ್ಧೀಕರಿಸಿಕೊಳ್ಳುವುದಕ್ಕಾಗಲೀ, ಇಲ್ಲವೇ ಒಂದು ಶುದ್ಧ ಹೃದಯವನ್ನು ಸೃಷ್ಟಿಸಿಕೊಳ್ಳುವುದಕ್ಕಾಗಲೀ ನಮಗೆ ಸಾಧ್ಯವಿಲ್ಲ. ದಾವೀದನು ಸಹಾ ಇದನ್ನರಿತು ತನ್ನಲ್ಲಿ ಹೊಸ ಹೃದಯವನ್ನು ನಿರ್ಮಿಸುವಂತೆ ದೇವರನ್ನು ಬೇಡಿಕೊಂಡನು. ನಿನ್ನ ಜೀವಿತದಲ್ಲಿಯೂ ಇಂಥಾ ಒಂದು ನೂತನ ಕಾರ್ಯವನ್ನುಂಟುಮಾಡಬೇಕೆಂದು ದೇವರು ಕಾದಿದ್ದಾನೆ. ನಿನ್ನ ಸ್ವನೀತಿಯೆಂಬ ಹರಕು ವಸ್ತ್ರದಂತಿರುವ ನಿನ್ನ ಹೃದಯವನ್ನು, ಕಾರ್ಯರೂಪಕ್ಕೆ ತರಲಾರದ ನಿನ್ನ ಎಲ್ಲಾ ಪ್ರಮಾಣ, ಪ್ರತಿಜ್ಞೆಗಳಿಂದ ತ್ಯಾಪೆಹಚ್ಚಿ ದೇವರಿಗೆ ಯೋಗ್ಯ ವಾಸಸ್ಥಾನವಾಗಿ ಮಾಡಲು ಸಾಧ್ಯವಿಲ್ಲ. "ನಾನು ನಿಮ್ಮ ಮೇಲೆ ನಿರ್ಮಲೋದಕವನ್ನು ಪ್ರೋಕ್ಷಿಸಲು ನೀವು ನಿರ್ಮಲರಾಗುವಿರಿ. ನಿಮ್ಮ ಸಮಸ್ತ ವಿಗ್ರಹಗಳಿಂದಲೂ ಸಕಲ ವಿಧವಾದ ಹೊಲಸಿನಿಂದಲೂ ನಿಮ್ಮನ್ನು ಶುದ್ಧಿಮಾಡುವೆನು. ನಾನು ನಿಮಗೆ ಹೊಸ ಮನಸ್ಸನ್ನು ಕೊಟ್ಟು ನಿಮ್ಮಲ್ಲಿ ನೂತನ ಸ್ವಭಾವವನ್ನು ಹುಟ್ಟಿಸುವೆನು. ಕಲ್ಲಾದ ಹೃದಯವನ್ನು ನಿಮ್ಮೊಳಗಿಂದ ತೆಗೆದು ಮೃದುವಾದ ಹೃದಯವನ್ನು ನಿಮಗೆ ದಯಪಾಲಿಸುವೆನು. ನನ್ನ ಆತ್ಮವನ್ನು ನಿಮ್ಮಲ್ಲಿ

Copyright ANCP

ನೆಲಸಿರುವಂತೆ ಅನುಗ್ರಹಿಸಿ ನೀವು ನನ್ನ ನಿಯಮಗಳನ್ನು ಅನುಸರಿಸುವ ಹಾಗೆ ಮಾಡು ವೆನು. ನೀವು ನನ್ನ ವಿಧಿಗಳನ್ನು ಕೈಕೊಂಡು ಆಚರಿಸುವಿರಿ"(ಯೆಹೆ: 36:25-27)ಎಂದು ವಾಗ್ದಾನ ಮಾಡಿದ ದೇವರು ನಿನಗೆ ಸಹಾಯ ಮಾಡಬೇಕೆಂದು ಬಹಳ ಹಂಬಲಿಸುತ್ತಾ ಕಾದಿದ್ದಾನೆ. ಆತನು ತನ್ನ ಮಗನಾದ ಯೇಸುಕ್ರಿಸ್ತನ ರಕ್ತದಿಂದ ಮುದ್ರೆ ಹಾಕಿದ ಹೊಸ ಒಡಂಬಡಿಕೆಯ ಅರ್ಥವು ಇದಾಗಿದೆ.

ಈ ಚಿತ್ರದಲ್ಲಿ, ದೇವದೂತನು ಪುನಃ ಕಾಣಿಸಿಕೊಳ್ಳುವುದನ್ನು ನೋಡುತ್ತೇವೆ. ದೇವರಲ್ಲಿ ಭಯ ಭಕ್ತಿಯುಳ್ಳವರ ಸುತ್ತಲೂ ದಂಡಿಳಿಸಿ ಕಾವಲಾಗಿದ್ದು ಕಾಪಾಡು ವುದಕ್ಕೂ ಅವರು ನಿತ್ಯಜೀವವನ್ನು ಪಡೆಯುವಂತೆ ಅವರ ಸೇವೆ ಮಾಡುವುದಕ್ಕೂ ದೇವದೂತರು ನೇಮಿಸಲ್ಪಟ್ಟಿದ್ದಾರೆ. (ಕೀರ್ತ: 34:7, 91:11; ದಾನಿ:6:22; ಮತ್ತಾಯ 2:13; 13:19; 18:10; ಅ.ಕೃ:5:19; 12:7-10)


ಹೃದಯದ ಸಮೀಪದಲ್ಲೇ ಸೈತಾನನೂ ನಿಂತಿರುವುದನ್ನು ಇಲ್ಲಿ ನೋಡಬಹುದು. ತನ್ನ ಹಿಂದಿನ ವಾಸಸ್ಥಳವನ್ನು ಪುನಃ ಪ್ರವೇಶಿಸುವುದಕ್ಕೆ ಒಂದು ಸಂದರ್ಭಕ್ಕಾಗಿ ಕಾತರತೆಯಿಂದ ಕಾದಿರುವುದು ಕಂಡುಬರುತ್ತದೆ. ಆದುದರಿಂದ ಯಾವಾಗಲೂ ಎಚ್ಚರ ವಾಗಿದ್ದು ಪ್ರಾರ್ಥಿಸುತ್ತಿರಬೇಕೆಂದು ನಾವು ಎಚ್ಚರಿಸಲ್ಪಟ್ಟಿರುತ್ತೇವೆ. ಏಕೆಂದರೆ, ನಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ. ಅನೇಕ ವೇಳೆ ಆತನು ಪ್ರಕಾಶಮಾನ ವಾದ ದೇವದೂತನ ವೇಷವನ್ನು ಧರಿಸಿ ಎಚ್ಚರವಾಗಿರದ ಅನೇಕ ದೇವಭಕ್ತರನ್ನು ಇಹಲೋಕದ ದುರಾಶೆಗಳಿಂದ, ಶೋಧನೆಗಳಿಂದ, ನಾನಾ ರೀತಿಯ ಕುತಂತ್ರಗಳಿಂದ ಮೋಸಗೊಳಿಸಿ ಕೆಡಿಸುತ್ತಾನೆ. ಆದರೆ ನಾವು ಆತನನ್ನು ಎದುರಿಸುವುದಾದರೆ ಆತನು ನಮ್ಮನ್ನು ಬಿಟ್ಟು ಓಡಿಹೋಗುವನು (ಯಾಕೋಬ. 4:7).

Copyright ANCP

### ಆರನೆಯ ಚಿತ್ರವು

ಈ ಚಿತ್ರವು ಕ್ರಿಸ್ತನಂಬಿಕೆಯಿಂದ ಹಿಂಜರಿದು ಹೋದ ಮನುಷ್ಯನ ದುಃಖಕರವಾದ ಸ್ಥಿತಿಯನ್ನು ತೋರಿಸುತ್ತದೆ. ಅವನ ಒಂದು ಕಣ್ಣು ಮುಚ್ಚಲು ಪ್ರಾರಂಭಿಸಿದೆ. ಅವನ ಕ್ರಿಸ್ತೀಯ ಜೀವಿತದಲ್ಲಿ ಅವನು ತಣ್ಣಗಾಗುತ್ತಿರುವುದನ್ನೂ ನಿದ್ರಾಲಸ್ಯದಿಂದ ತೂಂಬುತ್ತಿರುವುದನ್ನೂ ಇದು ತೋರಿಸುತ್ತದೆ. ಇದೇ ಸಮಯದಲ್ಲಿ ಅವನ ಮತ್ತೊಂದು ಕಣ್ಣು ಯಾವ ನಾಚಿಕೆಯೂ ಇಲ್ಲದೆ ಸುತ್ತಲೂ ತಿರುಗುತ್ತಾ, ಲೋಕದೊಂದಿಗೆ ಸ್ನೇಹ ವನ್ನು ಬೆಳೆಸುತ್ತಿರುವುದನ್ನು ನೋಡಬಹುದು. ಅವನ ಹೃದಯದೊಳಗಿದ್ದ ಪ್ರಕಾಶವು ಕಡಿಮೆಯಾಗುತ್ತಾ ಹೋಗಿದೆ. ಕ್ರಿಸ್ತನೊಂದಿಗೆ ಬಾಧೆಯನ್ನನುಭವಿಸಲು ಅವನಿಗಿದ್ದ ಸಿದ್ಧಮನಸ್ಸನ್ನು ಸೂಚಿಸುವ ಗುರುತುಗಳು ಕಡಿಮೆಯಾಗಿ, ಮೊದಲು ಇದ್ದ ಸಿದ್ಧತೆ

ಯನ್ನು ಕಳಕೊಂಡಿರುತ್ತದೆ. ಈಗ ಅವನು ವಿವಿಧ ಶೋಧನೆಗಳಿಂದ ಆವರಿಸಲ್ಪಟ್ಟಿದ್ದಾನೆ. ಅವುಗಳನ್ನು ಎದುರಿಸಿ ಜಯಿಸುವ ಬದಲು, ಆತನು ಈಗ ಅವುಗಳಿಗೆ ನಿಧಾನವಾಗಿ ಒಳಗಾಗುತ್ತಲಿದ್ದಾನೆ. ದೇವರ ಮಾತಿಗೆ ಕಿವಿಗೊಟ್ಟು ವಿಧೇಯನಾಗುವುದರ ಬದಲು ಆತನು ಶೋಧಕನಾದ ಸೈತಾನನ ಹೊಟ್ಟು ವಾಗ್ದಾನಗಳಿಗೂ, ಹಿತಕರವಾಗಿ ತೋರುವ ಆತನ ಸಲಹೆಗಳಿಗೂ ಕಿವಿಗೊಡಲು ಪ್ರಾರಂಭಿಸಿದ್ದಾನೆ. ಒಂದು ವೇಳೆ ಆತನು, ಇನ್ನೂ ದೇವಾಲಯಕ್ಕೆ ಕ್ರಮವಾಗಿ ಹೋಗುವವನಾಗಿರಬಹುದು. ಹೀಗೆ ಈ ಮತಾ




**ಶೋಧನೆಗೆ ಒಳಗಾಗಿ ವಿಭಾಗಿಸಲ್ಪಟ್ಟ ಹೃದಯ**

ಸಕ್ತಿಯ ವೇಶದಿಂದ ತನ್ನ ಲೌಕಿಕ ಭಾವವನ್ನು ಮರೆಮಾಡಲು ಪ್ರಯತ್ನಿಸುತ್ತಿರಬಹುದು. ಆದರೆ ಆತನ ಹೃದಯದಲ್ಲಿ ದೇವರ ಕಡೆಗಿರುವ ಪ್ರೀತಿಯು ತಣ್ಣಗಾಗಿ ಹೋಗಿರುತ್ತದೆ. ಹೀಗಾಗಿ ಅವನು ಎರಡು ಮನಸ್ಸುಳ್ಳವನೂ, ಎರಡು ಅಭಿಪ್ರಾಯಗಳ ನಡುವಿನಲ್ಲಿ ಸಿಕ್ಕಿಬಿದ್ದವನೂ ಆಗಿರುತ್ತಾನೆ. ಆತನು ಈಗ ದೇವರನ್ನು ಪ್ರೀತಿಸುವವನಂತೆ ನಟಿಸುತ್ತಾ ಅಂತರ್ಯದಲ್ಲಿ ಲೋಕದೊಂದಿಗೆ ಇಚ್ಛೋಡಾಗಿ ಜೀವಿಸುತ್ತಿದ್ದಾನೆ. ಅವನ ಹೃದಯದಲ್ಲಿದ್ದ ಮನಸ್ಸಾಕ್ಷಿಯೆಂಬ ನಕ್ಷತ್ರವು ಪ್ರಭೆಗುಂದುತ್ತಾ ಹೋಗಿದೆ. ಈಗ ಮೊದಲಿನಂತೆ ಮನಃಪೂರ್ವಕವಾಗಿ ಸಂತೋಷದಿಂದ ಕ್ರೂಜೆಯನ್ನು ಹೊತ್ತುಕೊಳ್ಳುವುದಿಲ್ಲ. ಈಗ ಅವನಿಗೆ ಅದೊಂದು ಹೊರೆಯಂತೆ ತೋರುತ್ತದೆ. ಅವನ ನಂಬಿಕೆಯು ಚಂಚಲವಾಗುತ್ತಿದೆ. ಪ್ರಾರ್ಥನೆಯ ಮೂಲಕ ದೇವರೊಂದಿಗಿದ್ದ ಅನ್ಯೋನ್ಯತೆಯು ತಪ್ಪಿಹೋಗುತ್ತದೆ. ಹೀಗಾಗಿ, ತನ್ನ ಹೃದಯದ ಸ್ಥಿತಿಯ ವಿಷಯದಲ್ಲಿ ಅಲಕ್ಷ್ಯಭಾವದಿಂದ ಅಜಾಗ್ರತೆಯುಳ್ಳವನಾಗಿ ಬೆಳೆದು, ಕೊನೆಗೆ, ಹೊರಗೆ ಹೊಂಚುಹಾಕುತ್ತಿರುವ ಸೈತಾನನಿಗೆ ತನ್ನ ಹೃದಯದಲ್ಲಿ ಸ್ಥಳ ಮಾಡಿಕೊಡುತ್ತಾನೆ. ನಿಜವಿಶ್ವಾಸಿಗಳ ಅನ್ಯೋನ್ಯತೆಗಿಂತ, ಲೋಕದ ಜನರ ಸಹವಾಸವು ಅವನಿಗೆ ಸಂತೋಷವನ್ನುಂಟುಮಾಡುತ್ತದೆ.

ಹೆಮ್ಮೆಯನ್ನು ಸೂಚಿಸುವ ನವಿಲು ಈಗ ಆತನ ಹೃದಯವನ್ನು ಪ್ರವೇಶಿಸಲು ಪ್ರಯತ್ನಿಸುತ್ತದೆ. ದೇವರ ಕೃಪೆಯಿಂದ ಮಾತ್ರವೇ ತಾನು ರಕ್ಷಿಸಲ್ಪಟ್ಟೆನೆಂಬುದನ್ನು ಆತನು ಮರೆತುಬಿಟ್ಟು, ತನ್ನ ವಿಷಯದಲ್ಲಿ ಉಬ್ಬಿಕೊಳ್ಳುವ ಕ್ರೈಸ್ತನಾಗುತ್ತಾನೆ. ಕ್ರಮೇಣ, ಕುಡಿಕತನದ ಆಶೆಯೂ ಆತನ ಹೃದಯವನ್ನು ತಟ್ಟಲಾರಂಭಿಸಿ ಒಳಸೇರಲು ಪ್ರಯತ್ನಿಸುತ್ತದೆ. ಯಾವದಾದರೊಂದು ವಿಶೇಷ ಸಂದರ್ಭದಲ್ಲಿ, ಆತನು ಲೋಕದ ಸ್ನೇಹಿತರೊಂದಿಗಿರುವಾಗ, ಅವರೆದುರಿನಲ್ಲಿ ಕೇವಲ ಹೇಡಿಯಂತೆ, ಇಲ್ಲವೇ ಇತರರೊಂದಿಗೆ ಬೆರೆತುಕೊಳ್ಳದ ವಿಪರೀತ ವ್ಯಕ್ತಿಯಾಗಿ ಕಂಡು ಬರಬಾರದೆಂದು ಎಣಿಸುತ್ತಾನೆ. ಅವನ ಹೃದಯದಲ್ಲಿ "ಈ ಒಂದು ಸಂದರ್ಭದಲ್ಲಿ ಮಾತ್ರ ಅವರಿಗನುಕೂಲವಾಗಿ ವರ್ತಿಸಿದರೆ, ನನ್ನ ಆತ್ಮೀಕ ಜೀವಿತದಲ್ಲಿ ಹಾನಿ ಬರಲಾರದು" ಎಂಬ ಭಾವನೆಯನ್ನು ಸೈತಾನನು ಹುಟ್ಟಿಸುತ್ತಾನೆ. ಶರೀರ ಭಾವದ ಆಲೋಚನೆಗಳೂ ಕೆಟ್ಟ ಕಲ್ಪನೆಗಳೂ ಆತನ ಮನಸ್ಸನ್ನು ದಾಟಿ ಹೋಗುತ್ತವೆ. ಹೀಗಾಗಿ, ಅನೈತಿಕ ಕುಚೋದ್ಯಗಳಲ್ಲಿ ಸಂತೋಷಪಡುವುದರಲ್ಲಿ, ಇಲ್ಲವೇ ಅನೈತಿಕ ಚಿತ್ರಗಳನ್ನು ಪುನಃ ಪುನಃ ದುರಾಶೆ ತುಂಬಿದ ಕಣ್ಣುಗಳಿಂದ ನೋಡುವುದರಲ್ಲಿಯೂ, ಅನೈತಿಕ ವ್ಯಕ್ತಿಗಳ ಸಹವಾಸದಲ್ಲಿಯೂ ಆತನು ಸಂತೋಷಪಡಲು ಪ್ರಾರಂಭಿಸುವನು. ಇವುಗಳು ಆತನನ್ನು ನೃತ್ಯಮಂದಿರಗಳಿಗೂ ಇತರ ಮನೋರಂಜನೆಯ ಸ್ಥಳಗಳಿಗೂ ನಡೆಸುತ್ತವೆ. ಹೀಗೆ, "ಜೀವನವೇ ಓಡಿಗಿದೆ. ಇದರಲ್ಲಿ ಒಮ್ಮೆ ತಪ್ಪಿಬಿದ್ದರೆ ಅದು ಪಾಪವಲ್ಲ" ಎಂಬಿತ್ಯಾದಿ ಮಾತುಗಳಿಂದ

Copyright AMCF

ಹೃದಯವನ್ನು ಮೋಸಗೊಳಿಸುವ ಪಿಶಾಚನ ಎಲ್ಲಾ ಸಲಹೆಗಳನ್ನು ಆತನು ಸ್ವೀಕರಿಸ ಲಾರಂಭಿಸುತ್ತಾನೆ.

ಅಶುದ್ಧತೆಗೆ ಮತ್ತು ದುಷ್ಟತನಕ್ಕೆ ಸಂಬಂಧಿಸಿದ ಕೆಟ್ಟ ಆಲೋಚನೆಗಳು ಪಕ್ಷಿಗಳಂತೆ ನಮ್ಮ ತಲೆಯ ಸುತ್ತಲೂ ಹಾರಾಡದಂತೆ ಮಾಡಲು ನಮಗೆ ಸಾಧ್ಯವಿಲ್ಲದಿರಬಹುದು. ಆದರೆ, ಅವುಗಳನ್ನು ನಮ್ಮ ತಲೆಯ ಮೇಲೆ ಎರಗುವಂತೆಯೂ, ಹೃದಯದಲ್ಲಿ ಗೂಡು ಕಟ್ಟುವಂತೆಯೂ, ಕೆಟ್ಟ ಕಾರ್ಯಗಳ ಮೊಟ್ಟೆಯನ್ನಿಟ್ಟು ಮರಿಗಳನ್ನು ಪಡೆ ಯಲೂ ಬಿಟ್ಟುಕೊಟ್ಟಲ್ಲಿ, ನಾವು ಅಪರಾಧಿಗಳಾಗುತ್ತೇವೆ. ನಮ್ಮ ಕಿರಿಬೆರಳನ್ನು ಪಿಶಾಚನಿಗೆ ಚಾಚಿಕೊಡುವುದಾದರೆ, ಆತನು ನಮ್ಮ ಇಡೀ ಕೈಯನ್ನು ಹಿಡಿದುಕೊಂಡು, ಕೊನೆಗೆ ನಮ್ಮ ಆತ್ಮ ಪ್ರಾಣಗಳನ್ನು ನರಕಕ್ಕೆ ಎಳೆಯುವುದರಲ್ಲಿ ಸಂದೇಹವಿಲ್ಲ. ಆದು ದರಿಂದ ಶರೀರ ಭಾವದ ಆಶೆಗಳಿಂದ ದೂರ ಓಡಿ ಹೋಗುವಂತೆಯೂ, ಯಾವ ರೂಪ ದಲ್ಲಿ ಬಂದರೂ, ಪಾಪದೊಂದಿಗೆ ಆಟವಾಡದಂತೆಯೂ ದೇವರು ತನ್ನ ಗಂಭೀರವಾದ ಎಚ್ಚರಿಕೆಯನ್ನು ನೀಡಿರುತ್ತಾನೆ. ನಿನ್ನ ಸ್ಥಿತಿಯು ಇದಾಗಿರುವುದಾದರೆ, ಪೂರ್ಣ ಜಯ ಶಾಲಿಯೂ, ಬಿಡುಗಡೆಗೊಳಿಸುವವನೂ ಆದ ಯೇಸುಕ್ರಿಸ್ತನ ಬಳಿಗೆ ಓಡಿ ಹೋಗಿ ಆತ ನನ್ನು ಆಶ್ರಯಿಸು.


ಇಲ್ಲಿ ಒಬ್ಬ ಮನುಷ್ಯನು ಒಂದು ಚೂರಿಯಿಂದ ಹೃದಯವನ್ನು ತಿವಿಯುತ್ತಿರುವು ದನ್ನು ಕಾಣಬಹುದು. ಇದು ಕ್ರೈಸ್ತರಿಗಿರುವ ವಿರೋಧಿಗಳನ್ನೂ ಹಾಸ್ಯ ಮಾಡುವವ ರನ್ನೂ ಸೂಚಿಸುತ್ತದೆ. ತಮ್ಮ ಹೊಲಸು ಮಾತಿನ ನಾಲಗೆಯಿಂದಲೂ ಹಾಸ್ಯ ಮಾಡುವ ತುಟಿಗಳಿಂದಲೂ ಅವರು ಅನೇಕ ಕ್ರೈಸ್ತರ ಹೃದಯಗಳನ್ನು ತಿವಿದು ಗಾಯಗೊಳಿಸು ತ್ತಾರೆ. ಈ ತಿವಿತಗಳನ್ನು ಚಂಚಲಹೃದಯವು ತಾಳಿಕೊಂಡು ನಿಲ್ಲಲಾರದು. ಹೀಗೆ ಆತನು ದೇವರಿಗೆ ಭಯಪಡುವುದಕ್ಕಿಂತಲೂ ಹೆಚ್ಚಾಗಿ ಮನುಷ್ಯರಿಗೆ ಭಯಪಡುತ್ತಾನೆ. ಮನುಷ್ಯರು ತನಗೇನು ಹೇಳುವರೋ, ಏನು ಮಾಡುವರೋ ಎಂಬ ಭಯದಿಂದಾಗಿ ಅವನು ಮನುಷ್ಯರ ದಾಸನಾಗಿ ದೇವರಿಂದ ದೂರಕ್ಕೆ ಸರಿಯುತ್ತಾನೆ. ತೊಂದರೆ, ನಿರಾಶೆಗಳ ಸಮಯದಲ್ಲಿ ಕೋಪ ರೌದ್ರಗಳು ಹೃದಯದೊಳಗೆ ಪ್ರವೇಶವನ್ನು ಬಯಸು ತ್ತವೆ. ಇತರರು ತನಗಿಂತಲೂ ಜಯಶಾಲಿಗಳಾಗಿ ಅಭಿವೃದ್ಧಿಗೊಳ್ಳುತ್ತಾ ಮುಂದುವರಿ ಯುವುದನ್ನು ನೋಡುವಾಗ, ಆತನಿಗೆ ಅರಿವಿಲ್ಲದೇ ಮತ್ಸರವೆಂಬ ಕೆಟ್ಟ ಹಾವು ಮೆಲ್ಲನೇ ಹರಿದುಕೊಂಡು ಬರುತ್ತದೆ. ಅದಕ್ಕೆ ಒಂದು ಅಲ್ಪ ಸಂದರ್ಭ ದೊರೆತರೆ ಸಾಕು, ಕೂಡಲೇ ದ್ವೇಷ, ಹೆಮ್ಮೆ, ಮುಂತಾದವುಗಳಿಗೆಲ್ಲಾ ಬಾಗಿಲು ತೆರೆದು ಕೊಡುತ್ತದೆ.

"ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ" (ಮತ್ತಾ. 26:41) ಎಂಬ ಎಚ್ಚರಿಕೆಗೆ ಗಮನ ಕೊಡದಿದ್ದಲ್ಲಿ, ಹಣದಾಶೆಯು ನಮ್ಮ ಹೃದಯವನ್ನು ಬಹಳ ಸುಲಭವಾಗಿ ಪ್ರವೇಶಿಸುವುದು. "ಆದ ಕಾರಣ ನಿಂತಿದ್ದೇನೆಂದು ನೆನಸುವವನು

Copyright ANCP

ಬೀಳದಂತೆ ಎಚ್ಚರವಾಗಿರಲಿ" (1 ಕೊರಿ: 10:12) ಸೈತಾನನ ತಂತ್ರೋಪಾಯಗಳನ್ನು ಎದುರಿಸಿ ನಿಲ್ಲುವದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧ ಗಳನ್ನು ನಾವು ಧರಿಸಿಕೊಳ್ಳುವುದು ಅವಶ್ಯವಾಗಿದೆ. (ಎಫೆಸ: 6:11-18)

**ಏಳನೆಯ ಚಿತ್ರವು**




**ಹಿಂಜರಿದ ಅಥವಾ ಕಠಿಣವಾದ ಹೃದಯ**

ಸಂಪೂರ್ಣ ಹಿಂಜರಿದು ಬಿದ್ದುಹೋದ ಹೃದಯವನ್ನು ಈ ಚಿತ್ರವು ತೋರಿಸು ತ್ತದೆ. ಆತನು ಒಮ್ಮೆ ಜ್ಞಾನ ಪ್ರಕಾಶದಲ್ಲಿ ಸೇರಿ, ಪರಲೋಕದಿಂದಾಗುವ ದಾನದ

ಅನುಭವವನ್ನು ಹೊಂದಿಕೊಂಡು, ಪವಿತ್ರಾತ್ಮವರದಲ್ಲಿ ಪಾಲುಗಾರನಾಗಿದ್ದರೂ ಈಗ ಭ್ರಷ್ಟನಾಗಿದ್ದಾನೆ. ಸುವಾರ್ತೆಯ ವಾಕ್ಯವು ತನಗೆ ಪ್ರಕಟವಾಗಿದ್ದರೂ, ಎಂದೂ ಪಶ್ಚಾತ್ತಾಪಪಡದೆ ದೇವರಿಗೆ ತನ್ನನ್ನು ಒಳಪಡಿಸದೆ ಇರುವ ವ್ಯಕ್ತಿಯ ಹೃದಯದ ಸ್ಥಿತಿಯನ್ನು ಸಹಾ ಈ ಚಿತ್ರವು ತೋರಿಸುತ್ತದೆ. ದೇವರು ಪ್ರೀತಿಯಿಂದ ಪ್ರೇರೇಪಿಸಿ ಒತ್ತಾಯ ಮಾಡುವಾಗ, ತನ್ನ ಹೃದಯವನ್ನು ಕಠಿನ ಮಾಡಿಕೊಳ್ಳುವವನು, ತನ್ನನ್ನು ಸರಿಪಡಿಸಿಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಹೆಚ್ಚೆಚ್ಚು ಹೀನ ಸ್ಥಿತಿಗಿಳಿಯುತ್ತಾನೆ.

ಈ ರೀತಿ ಹಿಂಜರಿದು ಬಿದ್ದುಹೋದವರ ವಿಷಯವಾಗಿ ಯೇಸುಸ್ವಾಮಿಯು ಹೇಳುವುದೇನೆಂದರೆ, "ದೆವ್ವವು ಮನುಷ್ಯನನ್ನು ಬಿಟ್ಟು ಹೋದ ಮೇಲೆ ವಿಶ್ರಾಂತಿಯನ್ನು ಹುಡುಕುತ್ತಾ ನೀರಿಲ್ಲದ ಸ್ಥಳಗಳಲ್ಲಿ, ತಿರುಗಾಡುತ್ತದೆ. ವಿಶ್ರಾಂತಿ ಸಿಕ್ಕದ ಕಾರಣ ಅದು – ನಾನು ಬಿಟ್ಟು ಬಂದ ನನ್ನ ಮನೆಗೆ ಹಿಂತಿರುಗಿ ಹೋಗುತ್ತೇನೆ ಅಂದುಕೊಂಡು ಬಂದು, ಆ ಮನೆ ಗುಡಿಸಿ ಅಲಂಕರಿಸಿದ್ದಾಗಿರುವುದನ್ನು ಕಂಡು ಹೊರಟುಹೋಗಿ ತನಗಿಂತ ಕೆಟ್ಟವುಗಳಾದ ಬೇರೆ ಏಳು ದೆವ್ವಗಳನ್ನು ಕರಕೊಂಡು ಬರುವುದು. ಅವು ಒಳಹೊಕ್ಕು ಅಲ್ಲಿ ವಾಸ ಮಾಡುವುವು. ಆಗ ಆ ಮನುಷ್ಯನ ಅಂತ್ಯ ಸ್ಥಿತಿಯು ಮೊದಲಿಗಿಂತ ಕೆಟ್ಟದಾಗುವುದು" (ಲೂಕ 11:24:26). "ನಾಯಿಯು ತಾನು ಕಕ್ಕಿದ್ದನ್ನು ನೆಕ್ಕುವುದಕ್ಕೆ ತಿರುಗಿಕೊಂಡಿತು ಮತ್ತು ತೊಳೆದ ಹಂದಿ ಕೆಸರಿನಲ್ಲಿ ಹೊರಳುವುದಕ್ಕೆ ಹೋಯಿತು ಎಂಬ ಗಾದೆಗೆ ಸರಿಯಾಗಿ ನಡೆದಿದ್ದಾರೆ." (2 ಪೇತ್ರ 2:22)

ಈ ವಚನಗಳು ಹಿಂಜರಿದು ಹೋದ ಇಲ್ಲವೇ ಪಶ್ಚಾತ್ತಾಪಪಡದ ಮನುಷ್ಯನ ಹೃದಯದ ಸ್ಥಿತಿಯನ್ನು ತೋರಿಸುತ್ತವೆ. ಪಾಪವು ಎಲ್ಲಾ ಮೋಸದೊಡನೆ ಹೃದಯದಲ್ಲಿ ನೆಲೆಯಾಗಿ ಆಳಲು ಪುನಃ ಬಂದಿರುತ್ತದೆ. ಅವನ ಮುಖಭಾವವು ಸಹಾ ಆತನ ಹೃದಯದ ಸ್ಥಿತಿಯನ್ನು ಸ್ವಲ್ಪ ಮಟ್ಟಿಗೆ ತೋರಿಸಿಕೊಡುತ್ತದೆ. ಪರಿಶುದ್ಧಾತ್ಮನೂ ಪಾಪವೂ ಹೃದಯದಲ್ಲಿ ಒಟ್ಟಾಗಿ ನೆಲಸಿರಲು ಸಾಧ್ಯವಿಲ್ಲದ ಕಾರಣ, ಪರಿಶುದ್ಧಾತ್ಮನನ್ನು ಸೂಚಿಸುವ ಆ ಪಾರಿವಾಳವು ಹೃದಯವನ್ನು ಬಿಟ್ಟುಹೋಗುವುದನ್ನು ಈ ಚಿತ್ರದಲ್ಲಿ ಕಾಣಬಹುದು. ಹೃದಯವು ಏಕಕಾಲದಲ್ಲಿ ದೇವರ ಮಂದಿರವಾಗಿಯೂ, ಸೈತಾನನ ನೆಲೆಯಾಗಿಯೂ ಇರಲು ಸಾಧ್ಯವಿಲ್ಲ. ದೇವರ ವಾಕ್ಯವನ್ನು ಸೂಚಿಸುವ ದೇವರ ಸೇವಕನು ದುಃಖದಿಂದ ಅಗಲಬೇಕಾಗುತ್ತದೆ. ಆದರೂ ಆತನು (ಇಲ್ಲವೇ ಆಕೆಯು) ತಪ್ಪಿಹೋದ ಮಗನಂತೆ ಪಶ್ಚಾತ್ತಾಪ ಪಡಬಹುದೆಂಬ ನಿರೀಕ್ಷೆಯಿಂದ, ಹಿಂದಕ್ಕೆ ತಿರುಗಿ ನೋಡುತ್ತಾ ಕಾದಿದ್ದಾನೆ. ಈ ತಪ್ಪಿಹೋದ ಮಗನು "ಹಂದಿ ತಿನ್ನುತ್ತಿದ್ದ ಕಾಯಿಗಳನ್ನಾದರೂ ತಿಂದು ಹಸಿವೆ ತೀರಿಸಿಕೊಳ್ಳಬೇಕೆಂದು ಆಶೆಪಟ್ಟನು. ಆದರೆ ಯಾರೂ ಅವನಿಗೆ ಕೊಡಲಿಲ್ಲ. ಆಗ ಅವನಿಗೆ ಬುದ್ಧಿ ಬಂದು ಅವನು – ನನ್ನ ತಂದೆಯ ಬಳಿಯಲ್ಲಿ ಎಷ್ಟೋ ಮಂದಿ ಕೂಲಿಯಾಳುಗಳಿಗೆ ಬೇಕಾದಷ್ಟು ಆಹಾರವದೆ. ನಾನಾದರೋ ಇಲ್ಲಿ

Copyright AWCP

ಹಸಿವಿನಿಂದ ಸಾಯುತ್ತೇನೆ. ನಾನು ಎದ್ದು ನನ್ನ ತಂದೆಯ ಬಳಿಗೆ ಹೋಗಿ ಅವನಿಗೆ – ಅಪ್ಪಾ ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪ ಮಾಡಿದ್ದೇನೆ. ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವುದಕ್ಕೆ ಯೋಗ್ಯನಲ್ಲ" ಎಂದು ಹೇಳುವೆನು ಅಂದುಕೊಂಡನು. (ಲೂಕ 15:18) ಆತನ ತಂದೆಯು, ಪಶ್ಚಾತ್ತಾಪದಿಂದ ಮುರಿದು ಹೋದ ತನ್ನ ಮಗನನ್ನು ಕ್ಷಮಿಸಿ ಆತನನ್ನು ಆತನ ಮೊದಲಿನ ಸ್ಥಾನಕ್ಕೆ ಸೇರಿಸಿದನು.

ಹೃದಯದ ಈ ಚಿತ್ರವು ನಿಜವಾದ ಪಶ್ಚಾತ್ತಾಪವನ್ನಾಗಲೀ, ದೇವರ ಕಡೆಗೆ ತಿರುಗಿಕೊಳ್ಳುವುದನ್ನಾಗಲೀ, ಕ್ರಿಸ್ತನ ಪಾದದಲ್ಲಿ ಪಾಪಕ್ಷಮೆಯನ್ನು ಬೇಡುವುದನ್ನಾಗಲೀ ತೋರಿಸುವುದಿಲ್ಲ. ಆತನ ಮನಸ್ಸಾಕ್ಷಿಯು ಒಂದು ಕಾದ ಕಬ್ಬಿಣದದಿಂದ ಸುಟ್ಟು ಹಾಕಲ್ಪಟ್ಟಿದೆಯೋ ಎಂಬಂತೆ ಯೇಸುಸ್ವಾಮಿಯ ಸ್ವರವನ್ನು ಆತನು ಕೇಳಲಾರನು. ಕಣ್ಣುಗಳಿದ್ದರೂ ತನ್ನ ಪಾದದ ಬುಡದಲ್ಲೇ ಬಾಯಿ ತೆರೆದಿರುವ ನರಕದ ತಳವಿಲ್ಲದ ಗುಂಡಿಯನ್ನು ಆತನು ಕಾಣಲಾರನು. ತನ್ನ ಪಾಪಗಳಲ್ಲೇ ಮುಂದುವರಿಯುವುದರಲ್ಲಿ ಆತನಿಗೆ ಈಗ ಯಾವ ನಾಚಿಕೆಯೂ ಇರುವುದಿಲ್ಲ. ಸೈತಾನನು ಆತನ ಹೃದಯದಲ್ಲಿ ಆಳುವುದಕ್ಕೆ ಬಂದು ತನ್ನ ಸಿಂಹಾಸನದಲ್ಲಿ ಅರಸನಂತೆ ಕುಳಿತಿದ್ದಾನೆ. ಈ ಸ್ಥಿತಿಯಲ್ಲಿದ್ದರೂ ಆ ಮನುಷ್ಯನು ತಾನು ಹೊರಗಿನ ತೋರಿಕೆಯಲ್ಲಿ ಯೋಗ್ಯನಾಗಿಯೂ ಗೌರವಪಾತ್ರನಾಗಿಯೂ ಇರುವೆನೆಂದು ಹೆಮ್ಮೆಪಟ್ಟುಕೊಳ್ಳಬಹುದು. ಹೀಗೆ ಆತನು ಇತರರಿಗೆ ಭಕ್ತನಂತೆ ಕಾಣಿಸಿಕೊಂಡರೂ ಸುಣ್ಣ ಹಚ್ಚಿದ ಸಮಾಧಿಯಂತೆ ಇದ್ದಾನೆ. ಆದರೆ ಒಳಗೆ ಅದು ಸತ್ತವರ ಎಲುಬಿನಿಂದಲೂ ಎಲ್ಲಾ ಹೊಲಸಿನಿಂದಲೂ ತುಂಬಿರುತ್ತದೆ. (ಮತ್ತಾಯ 23.27)

Copyright ANGP

ಎಲ್ಲಾ ಸುಳ್ಳಿಗೂ ಮೂಲ ತಂದೆಯಾದ ಸೈತಾನನು ಸತ್ಯದ ಆತ್ಮನ ಸ್ಥಾನವನ್ನು ಈಗ ಆಕ್ರಮಿಸಿಕೊಂಡಿರುತ್ತಾನೆ. ವಿವಿಧ ಪ್ರಾಣಿಗಳಿಂದ ಸೂಚಿತವಾದ ಪಾಪಗಳು ಈಗ ಒಬ್ಬೊಬ್ಬ ಪಿಶಾಚನಿಂದ ಇಲ್ಲವೇ ದುರಾತ್ಮನಿಂದೊಡಗೂಡಿ ಹೃದಯವನ್ನು ಸೇರಿರುತ್ತವೆ. ಈ ಎಲ್ಲಾ ದುಷ್ಟ ಹಿಂಸಕರಿಂದ ಬಿಡುಗಡೆ ಹೊಂದಬೇಕೆಂಬ ಆಶೆಯು ಆತನಿಗಿರುವುದಾದರೂ ಅವುಗಳು ಆತನನ್ನು ಬಂಧನದಲ್ಲಿರಿಸುತ್ತವೆ. "ಮೋಶೆಯ ವಿಧಿಗಳನ್ನು ಅಸಡ್ಡೆ ಮಾಡಿದವನಿಗೆ ಇಬ್ಬರು ಇಲ್ಲವೆ ಮೂವರು ಸಾಕ್ಷಿಗಳ ಮಾತಿನ ಮೇಲೆ ಕನಿಕರವಿಲ್ಲದೆ ಮರಣದಂಡನೆ ಆಗುತ್ತದಷ್ಟೆ. ಯಾವನು ದೇವಕುಮಾರನನ್ನು ತುಳಿದು ಒಡಂಬಡಿಕೆಯನ್ನು ಸ್ಥಿರಪಡಿಸಿದಂಥ, ತನ್ನನ್ನು ಪವಿತ್ರ ಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರ ಮಾಡಿದ್ದಾನೋ ಅವನು ಇನ್ನೂ ಎಷ್ಟೋ ಕ್ರೂರವಾದ ದಂಡನೆಗೆ ಪಾತ್ರನಾಗಬೇಕೆಂಬುದನ್ನು ಯೋಚಿಸಿರಿ." (ಇಬ್ರಿಯ 10:28-29, 2 ಪೇತ್ರ 1:1-14)


ಪ್ರಿಯ ವಾಚಕನೇ, ಈ ಚಿತ್ರವು ನಿನ್ನ ಹೃದಯದ ಸ್ಥಿತಿಯನ್ನು ತೋರಿಸುವುದಾದರೆ, ನಿನ್ನ ಹೃದಯದ ಅಗಾಧದಿಂದ, ಈಗಲೇ ಸಹಾಯಕ್ಕಾಗಿ ದೇವರಿಗೆ ಕೂಗಿಕೋ. ಇನೂ ತಡಮಾಡಬೇಡ. ಆತನು ಪರಿಪೂರ್ಣವಾಗಿ ರಕ್ಷಿಸಲು ಸಮರ್ಥನು. ಅಲ್ಲದೆ, ನೀನು ನಿಜವಾದ ಪಶ್ಚಾತ್ತಾಪದಿಂದ ಆತನ ಬಳಿಗೆ ಬರುವುದಾದರೆ ನಿನ್ನ ಎಲ್ಲಾ ಪಾಪಗಳನ್ನು ಕ್ಷಮಿಸಿಬಿಡಲು ಮನಸ್ಸುಳ್ಳವನೂ ಶಕ್ತನೂ ಆಗಿದ್ದಾನೆ. ಆತನು ನಿನ್ನಲ್ಲಿ ಕಾರ್ಯ ಸಾಧಿಸಲು ನೀನು ಸಿದ್ಧನಾಗಿರುವುದಾದರೆ, ಸೈತಾನನನ್ನೂ ಅಂಧಕಾರದ ಸಮಸ್ತ ಬಲವನ್ನೂ ಬಂಧಿಸಿ ನಿನ್ನ ಹೃದಯದಿಂದ ಹೊರಗೆ ಓಡಿಸಲು ಆತನು ಶಕ್ತನಾಗಿದ್ದಾನೆ ಒಬ್ಬ ಕುಷ್ಠರೋಗಿಯು ಯೇಸುವಿನ ಬಳಿಗೆ ಬಂದು "ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧ ಮಾಡಬಲ್ಲೆ" ಎಂದು ಹೇಳಿದಂತೆ ನೀನು ಸಹಾ ಆತನ ಬಳಿಗೆ ಬಂದು ಬೇಡಿಕೋ. ಆಗಲಾತನು "ನನಗೆ ಮನಸ್ಸುಂಟು, ಶುದ್ಧನಾಗು" (ಮಾರ್ಕ 1:40-41) ಎಂದು ಹೇಳುವನು. ಆದರೆ, ನೀನು, ನಿನ್ನ ಹೃದಯವನ್ನು ಕಠಿಣಪಡಿಸುವುದಾದರೆ, ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಇನ್ನೂ ನೀನು ಪ್ರೀತಿಸುವುದಾದರೆ ನಿನಗೆ ಯಾರೂ ಸಹಾಯ ಮಾಡಲಾರರು. ನಿನಗೆ ಯಾವ ನಿರೀಕ್ಷೆಯೂ ಇರಲಾರದು. ನೀನು ಸ್ವೇಚ್ಛೆಯಿಂದ ಜೀವವನ್ನು ತಿರಸ್ಕರಿಸಿ, ಮರಣವನ್ನು ಆರಿಸಿಕೊಳ್ಳುತ್ತೀ. "ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ" (ರೋಮಾ. 6:23).

Copyright ANCE

### ಎಂಟನೆಯ ಚಿತ್ರವು

ಅತಿರೇಕ ಅಲಕ್ಷ್ಯಭಾವದಿಂದ ಕೂಡಿದ, ಇಲ್ಲವೇ ಹೃದಯವನ್ನು ಕಠಿಣ ಮಾಡಿಕೊಂಡ ಪಾಪಿಯು ಮರಣಕ್ಕೆ ಸಮೀಪವಾಗುವುದನ್ನು ಇಲ್ಲಿ ಕಾಣುತ್ತೇವೆ. ಆತನ ದೇಹವು ವೇದನೆಯಿಂದಲೂ ಹೃದಯವು ಮರಣದ ಭಯದಿಂದಲೂ ತುಂಬಿರುತ್ತದೆ. ಆತನೆಂದೂ ಅಪೇಕ್ಷಿಸದ, ನಿರೀಕ್ಷಿಸದ ಸಮಯದಲ್ಲಿ ಮರಣವು (ಅಸ್ಥಿಪಂಜರ) ಆತನ ಬಳಿಗೆ ಬಂದಿರುತ್ತದೆ. ಮೋಸಕರವಾದ ಪಾಪ ಭೋಗದ ಸಮಯವು ಗತಿಸಿ ಹೋದವು. ಆ ಘೋರ ಪಾಪಗಳ ಭಯಂಕರವಾದ ಫಲವನ್ನು ಆತನು ಈಗ ಎದುರು ನೋಡಬೇಕಾಗಿ ಬಂದಿದೆ. ನರಕದ ಯಾತನೆಯು, ತನ್ನ ಕೈಯಲ್ಲಿ ಸಿಕ್ಕಿಬಿದ್ದ ಆತನನ್ನು ಪೀಡಿಸತೊಡಗಿದೆ. ಈಗ ಆತನು ದೇವರಿಗೆ ಪ್ರಾರ್ಥಿಸಬೇಕೆಂದು ಅಪೇಕ್ಷಿಸಿದಾಗ್ಯೂ, ತಾನು ಇದುವರೆಗೆ ಯಾರ ಪ್ರೀತಿಯನ್ನು ತಿರಸ್ಕರಿಸುತ್ತಾ ಬಂದನೋ ಆ ದೇವರ ಅನ್ಯೋನ್ಯತೆಯನ್ನು ಈಗ ಹೊಂದಲಾರನು. ಆತನ ಮೊದಲಿನ ಸ್ನೇಹಿತರು ಈಗ ಆತನ ಮಂಚದ ಬಳಿಯಲ್ಲಿ ನಿಲ್ಲಲು ಭಯಗೊಂಡು ದೂರ ಸರಿದಿದ್ದಾರೆ. ಅವರ ಹುರುಳಿಲ್ಲದ ಆದರಣೆಯ ಮಾತುಗಳು ಈಗ ಅವನಿಗೆ ಯಾವ ಸಹಾಯವನ್ನೂ ಮಾಡಲಾರವು. ಮೋಸದ ಮಾರ್ಗಗಳಿಂದ ಸಂಪಾದಿಸಿರಬಹುದಾದ ಆತನ ಐಶ್ವರ್ಯವು ಈಗ ಆತನ ಜೀವನದ

ದಿನಗಳನ್ನು ಹೆಚ್ಚಿಸಲಾರವು. ಇನ್ನು ಆತನ ಮರಣದ ವೇದನೆಯನ್ನೂ ಕಡಿಮೆ ಮಾಡಲಾರವು. ಪಿಶಾಚನು ಆ ಕಡೇ ಗಳಿಗೆಯಲ್ಲಿ ಆತನಿಗೆ ಮಾನಸಾಂತರದ ಯಾವ ಸಂದರ್ಭವನ್ನೇ ಕೊಡದಿರುವುದರಿಂದ ದೇವರಲ್ಲಿ ತನ್ನ ಮನಸ್ಸನ್ನಿರಿಸಲು ಆತನು ಶಕ್ತನಾಗಲಾರನು.




**ಪಾಪಿಷ್ಟನ ನಾಶನ**

ಆತನು ಯಾವದನ್ನು ಪ್ರೀತಿಸಿ ಯಾವದಕ್ಕಾಗಿ ಜೀವಿಸಿದ್ದನೋ ಅವೆಲ್ಲವೂ ಈಗ ಅವನಿಗೆ ಗೇಲಿಮಾಡುತ್ತಿರುವಂತೆ ತೋರುತ್ತದೆ. ಆತನು ದೇವರ ಕೃಪೆಯನ್ನು ತಿರಸ್ಕ


ರಿಸಿ ಧರ್ಮಶಾಸ್ತ್ರದ ತೀರ್ಪಿನೊಳಗೆ ಬಿದ್ದವನಾಗಿದ್ದಾನೆ. "ಜೀವ ಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವುದು ಭಯಂಕರವಾದದ್ದು" (ಇಬ್ರಿಯ: 10:31) ಎಂಬ ಸತ್ಯಾಂಶ ವನ್ನು ಆತನು ಈಗ ಗ್ರಹಿಸಿಕೊಳ್ಳಲಾರಂಭಿಸಿದ್ದಾನೆ. ತನಗೆ ಅನುಕೂಲವಾದ ಸಂದರ್ಭ ಬಂದಾಗ, ಇಲ್ಲವೇ ತನ್ನ ಮರಣದ ಹಾಸಿಗೆಯಲ್ಲಿ ದೇವರೊಂದಿಗೆ ಸಂಧಾನವಾಗಲು ಆತನು ಬಯಸಿದ್ದನು. ಆದರೆ ಈಗ ಸಮಯವು ತೀರಾ ತಡವಾಗಿ ಹೋಗಿದೆ ಎಂದು ಆತನು ಕಂಡುಕೊಳ್ಳುತ್ತಾನೆ. ತಮ್ಮ ಮರಣದ ಹಾಸಿಗೆಯಲ್ಲಿ ದೇವರನ್ನು ಹುಡುಕಲು ಸಂದರ್ಭ ದೊರಕದೆ ಸಾವಿರಾರು ಜನರು ನೆನಸದ ಗಳಿಗೆಯಲ್ಲಿ ಗತಿಸಿಹೋಗುತ್ತಾರೆ. ಆದುದರಿಂದ, ದೇವರು ಸಿಕ್ಕುವ ಕಾಲದಲ್ಲಿ ಆತನನ್ನು ಹುಡುಕುವುದು ಉತ್ತಮವಾಗಿದೆ. ಈ ಮನುಷ್ಯನಾದರೋ ತನ್ನನ್ನು ರಕ್ಷಿಸಲು ಶಕ್ತನಾದ ದೇವರ ಎಚ್ಚರಿಕೆಯ ಮಾತಿಗೆ ಕಿವಿ ಕೊಡುವುದರ ಬದಲು ಆತನ ಕೃಪೆಯನ್ನೂ ಪ್ರೀತಿಯನ್ನೂ ತನ್ನ ಜೀವಮಾನ ಕಾಲ ದಲ್ಲಿ ತಿರಸ್ಕರಿಸಿಬಿಟ್ಟನು. ಈಗ ತಾನು ತಿರಸ್ಕರಿಸಿದ ಆ ರಕ್ಷಕನೇ ನ್ಯಾಯಾಧಿಪತಿಯಾಗಿ ನಿಂತು, "ಶಾಪಗ್ರಸ್ಥರೇ, ಪಿಶಾಚನಿಗೂ ಆತನ ದೂತರಿಗೂ ಸಿದ್ಧಮಾಡಿಟ್ಟಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ" (ಮತ್ತಾಯ 25:41) ಎಂದು ಹೇಳುವುದನ್ನು ಕೇಳಬೇಕಾ ಗುತ್ತದೆ. "ಒಂದೇ ಸಾರಿ ಸಾಯುವುದು, ಆ ಮೇಲೆ ನ್ಯಾಯ ತೀರ್ಪು ಮನುಷ್ಯನಿಗೆ ನೇಮಕವಾಗಿದೆ" (ಇಬ್ರಿಯ 9:27).

Copyright ANCP

### ಒಂಬತ್ತನೆಯ ಚಿತ್ರವು

ಅತೀ ಘೋರವಾದ ಸಂಕಷ್ಟಗಳನ್ನೂ, ಇನ್ನಿತರ ದುರಾಶೆಗಳ ಶೋಧನೆಗಳನ್ನೂ ತಾಳಿಕೊಂಡು, ಜಯಶಾಲಿಯಾಗಿ ಜೀವಿಸುವ ಕ್ರೈಸ್ತನನ್ನು ಈ ಚಿತ್ರವು ತೋರಿಸುತ್ತದೆ. ಈ ರೀತಿ ಆತನು ಸರ್ವ ವಿಧಗಳಿಂದ ಶೋಧಿಸಲ್ಪಟ್ಟರೂ ಸ್ಥಿರವಾಗಿ ನಿಂತು ಕಡೇವರೆಗೂ ನಂಬಿಗಸ್ತನಾಗಿ ತಾಳುತ್ತಾ ಯೇಸುಕ್ರಿಸ್ತನ ಮೂಲಕ ಪೂರ್ಣ ಜಯಶಾಲಿ ಯಾಗಿ ಜೀವಿಸುತ್ತಾನೆ. ಆತನು ಕ್ರೈಸ್ತರಿಗೆ ನೇಮಕವಾದ ಓಟವನ್ನು ಓಡಲು ಪ್ರಾರಂಭಿ ಸುವುದು ಮಾತ್ರವಲ್ಲ, ದೇವರ ಕೃಪೆಯನ್ನಾಶ್ರಯಿಸಿ, ಎಡಕ್ಕಾಗಲೀ ಬಲಕ್ಕಾಗಲೀ, ನೋಡದೆ "ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸು ಕ್ರಿಸ್ತನ ಮೇಲೆ ದೃಷ್ಟಿಯಿಟ್ಟು" ತನಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದಲೂ ತಾಳ್ಮೆಯಿಂದಲೂ ಓಡುತ್ತಲಿದ್ದಾನೆ. (ಇಬ್ರಿಯ 12:1-2)

ಸೈತಾನನಾದರೊ ತನ್ನ ಸಮಸ್ತ ಸೈನ್ಯದೊಂದಿಗೆ ವಿಶ್ವಾಸಿಯ ಈ ಹೃದಯವನ್ನು ಸುತ್ತುಗಟ್ಟಿ ದೇವರ ಮಗುವನ್ನು ತಪ್ಪಾದ ಮಾರ್ಗಕ್ಕೆ ಎಳೆಯಲು ವಿಫಲ ಪ್ರಯತ್ನ ಮಾಡುತ್ತಿದ್ದಾನೆ. ಹೆಮ್ಮೆ, ಹೆಚ್ಚಳ, ಹಣದಾಸೆ, ಅನೈತಿಕ ದುರಾಶೆ ಮುಂತಾದ ದುರಾತ್ಮಗಳು ಸಹಾ ಇಲ್ಲಿ ಚಿತ್ರಿಸಲ್ಪಟ್ಟಿವೆ. ಚಿರತೆಯ ಸ್ಥಳದಲ್ಲಿ ಒಂದು ಕತ್ತೆಯನ್ನು




## ಜಯಿಸಲ್ಪಟ್ಟ ಹೃದಯ

ಇಲ್ಲಿ ಕಾಣುತ್ತೇವೆ. ಯಾಕಂದರೆ ಪಾಪವು ವಿವಿಧ ರೂಪಗಳನ್ನು ಧರಿಸಿ ಸಮ್ಮ ಸಮೀಪಕ್ಕೆ ಬಂದು ತಮ್ಮ ವಿವಿಧ ರೂಪ ಇಲ್ಲವೇ ಹೆಸರುಗಳಿಂದ ತನ್ನ ನಿಜ ಸ್ವರೂಪವನ್ನು ಮರೆಮಾಡಿಕೊಳ್ಳುತ್ತವೆ. ಈ ಪಾಪಗಳು ಧಾರ್ಮಿಕ ವಿಷಯಗಳ ರೂಪದ್ಲಲ್ಲಿ ಬಂದರೂ ಪ್ರಕಾಶಮಾನವಾದ ದೇವದೂತನ ವೇಷದಲ್ಲಿ ಬಂದರೂ ಎಚ್ಚರವಾಗಿರುವ ಕ್ರೈಸ್ತನು ಆದರ ನಿಜಸ್ಥಿತಿಯನ್ನು ಕಂಡುಕೊಳ್ಳುತ್ತಾನೆ. ಹೇಗೆಂದರೆ, ಸತ್ಯದ ಆತ್ಮನೂ, ದೇವರ ವಾಕ್ಯವೂ ಆತನನ್ನು ಎಲ್ಲಾ ವಿಷಯಗಳಲ್ಲಿ ಸತ್ಯಕ್ಕೆ ನಡಿಸುತ್ತವೆ. ಒಬ್ಬ ಮನುಷ್ಯನು

ಮದ್ಯದ ಬಾಟಲಿಯನ್ನು ಒಡಿದುಕೊಂಡು ಈ ನಿಜಕ್ರೈಸ್ತನ ಸುತ್ತಲೂ ನರ್ತಿಸುತ್ತಾ ಆತನನ್ನು ಇಹಲೋಕ ಭೋಗದ ದುರಾಶೆಯಿಂದ ಶೋಧಿಸುತ್ತಿದ್ದಾನೆ. ಆದರೆ ಆ ಶೋಧನೆಗಳು ಪರಿಪೂರ್ಣ ಪ್ರತಿಷ್ಠಿತನಾದ ಆ ಕ್ರೈಸ್ತನ ಮೇಲೆ ಯಾವ ಪ್ರಭಾವ ವನ್ನೂ ಬೀರಲಾರದು. ಏಕೆಂದರೆ, ಅವನು ಲೋಕದ ಮತ್ತು ಪಾಪದ ಪಾಲಿಗೆ ಕ್ರಿಸ್ತ ನೊಂದಿಗೆ ಶಿಲುಬೆಗೆ ಹಾಕಿಸಿಕೊಂಡಿದ್ದಾನೆ. ಮತ್ತೊಬ್ಬ ಮನುಷ್ಯನು ಒಂದು ಚೂರಿ ಯಿಂದ ಆ ಕ್ರೈಸ್ತನನ್ನು ತಿವಿಯುತ್ತಿರುವುದನ್ನೂ ಕಾಣಬಹುದು. ದೇವರ ವೈರಿ ಗಳಿಂದಲೂ, ಕೆಲವು ವೇಳೆ ಕ್ರೈಸ್ತ ವಿಶ್ವಾಸಿಗಳೆನಿಸಿಕೊಳ್ಳುವವರಿಂದಲೂ ಬರುವ ಕೆಟ್ಟ ಮಾತುಗಳು, ಚಾಡಿ, ಹಾಸ್ಯ, ಬೆದರಿಕೆಯ ಮಾತುಗಳು ಯಾವಾಗಲೂ ನಿಜವಿಶ್ವಾಸಿಯ ಹೃದಯವನ್ನು ತಿವಿಯುತ್ತಲೇ ಇರುತ್ತವೆ. ಆದರೆ ಆತನು ದೇವರು ಹೇಳುವ ಮಾತು ಗಳನ್ನು ಮಾತ್ರ ಲಕ್ಷಿಸುತ್ತಾ ಮನುಷ್ಯರ ಮಾತಿನ ಪಾಲಿಗೆ ಸತ್ತವನಾಗಿದ್ದಾನೆ. "ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ, ಹಿಂಸೆಪಡಿಸಿ, ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು. ಸಂತೋಷಪಡಿರಿ, ಉಲ್ಲಾಸ ಪಡಿರಿ, ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವುದು" (ಮತ್ತಾಯ 5:11-12) ಎಂದು ಆತನ ಸ್ವಾಮಿಯಾದ ಯೇಸುವು ಹೇಳಿದ ಮಾತುಗಳು ಆತನ ಜ್ಞಾಪಕದಲ್ಲಿರುತ್ತದೆ.

ಪಾಪವೂ, ಆತನ ಸ್ವಂತ ಇಚ್ಛಾಸೆಗಳೂ (ತಾನು ಎನ್ನುವ ಅಹಂಭಾವ), ಪಿಶಾ ಚನೂಕ್ರೈಸ್ತನನ್ನು ದೇವರ ಪ್ರೀತಿಯಿಂದ ಅಗಲಿಸಲು ತಮ್ಮ ಸರ್ವ ಪ್ರಯತ್ನವನ್ನು ಸತತ ನಡೆಸುತ್ತಿರುತ್ತವೆ. ಆದರೆ, ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಅನ್ನವಿಲ್ಲದಿರುವುದೋ, ವಸ್ತ್ರವಿಲ್ಲದಿರುವುದೋ (ರೋಮಾ: 8:35) ಎಂದು ಪೂರ್ಣ ಭರವಸದಿಂದಲೂ ಸಂತೋಷದಿಂದಲೂ ಈಗ ಆತನು ಹೇಳಬಲ್ಲನು. "ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗು ತ್ತೇವೆ" (ರೋಮಾ: 8:37). ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿ ದವನಾಗಿ, ಕಠಿನ ಯುದ್ಧವು ನಡೆಯುವ ದಿನದಲ್ಲಿ ಜಯಶಾಲಿಯಾಗಿ ನಿಲ್ಲುವುದಕ್ಕೂ, ಯೇಸುಕ್ರಿಸ್ತನ ಮೂಲಕ ಎಲ್ಲಾ ಶೋಧನೆಗಳನ್ನು ಜಯಿಸಲು ಆತನು ಶಕ್ತನಾಗಿದ್ದಾನೆ. ನಾವು ಎಲ್ಲಾ ಶೋಧನೆಗಳನ್ನು ಜಯಿಸಿ ಮಹಿಮಾ ಕಿರೀಟವನ್ನು ಹೊಂದುವಂತೆ, ಯೇಸುಕ್ರಿಸ್ತನು ಎಲ್ಲಾ ಶೋಧನೆಗಳನ್ನೂ, ಕಷ್ಟಕರವಾದ ಪರಿಶೋಧನೆಗಳನ್ನೂ ಜಯಿ ಸಿರುತ್ತಾನೆ.

ಆತನ ಮನಸ್ಸಾಕ್ಷಿ ಸೂಚಕವಾದ ನಕ್ಷತ್ರವು ಬಹಳ ಶುಭ್ರವಾಗಿ ಬೆಳಗುತ್ತದೆ. ಆತನ ಹೃದಯವು ಪರಿಪೂರ್ಣ ನಂಬಿಕೆಯಿಂದಲೂ ಪವಿತ್ರಾತ್ಮನಿಂದಲೂ ತುಂಬಿವೆ. ಕಡೇವರೆಗೂ ತಾಳಿಕೊಂಡು ಪೂರ್ಣ ಜಯಶಾಲಿಯಾಗುವವರಿಗೆ ಕೊಡಲ್ಪಟ್ಟ ಅಮೂಲ್ಯ ವಾಗ್ದಾನಗಳನ್ನು ದೇವರ ವಾಕ್ಯಸೂಚಕನಾದ ದೇವದೂತನು ನೆನಪುಮಾಡಿಕೊಡುತ್ತಿ

Copyright ANOP

ದ್ದಾನೆ. "ಯಾವನು ಜಯ ಹೊಂದುತ್ತಾನೋ ಅವನಿಗೆ ದೇವರ ಪರದೈಸಿನಲ್ಲಿರುವ ಜೀವದಾಯಕ ವೃಕ್ಷದ ಹಣ್ಣನ್ನು ತಿನ್ನುವುದಕ್ಕೆ ಕೊಡುವೆನು" (ಪ್ರಕ: 2:7). "ಜಯ ಹೊಂದುವವನಿಗೆ ಎರಡನೆಯ ಮರಣದಿಂದ ಕೇಡಾಗುವುದೇ ಇಲ್ಲ." (ಪ್ರಕಟಣೆ 2:11) "ಯಾವನು ಜಯ ಹೊಂದುತ್ತಾನೊ ಅವನಿಗೆ ಬಚ್ಚಿಟ್ಟಿರುವ ಮನ್ನವೆಂಬ ಆಹಾರವನ್ನು ಕೊಡುವೆನು. ಇದಲ್ಲದೆ ಅವನಿಗೆ ಬಿಳೀಕಲ್ಲನ್ನೂ ಆ ಕಲ್ಲಿನ ಮೇಲೆ ಕೆತ್ತಿದ ಹೊಸ ಹೆಸರನ್ನೂ ಕೊಡುವೆನು" (ಪ್ರಕ: 2:17). "ಯಾವನು ಜಯಶಾಲಿಯಾಗಿದ್ದು ನನಗೆ ಮೆಚ್ಚಿಕೆಯಾದ ಕೃತ್ಯಗಳನ್ನು ಕಡೇವರೆಗೂ ನಡೆಸುತ್ತಾನೋ ಅವನಿಗೆ ನಾನು......ಅಧಿಕಾರವನ್ನು ಕೊಡುವೆನು" (ಪ್ರಕ: 2:26). "ಜಯಶಾಲಿಗೆ ಹೀಗೆ ಶುಭ್ರವಸ್ತ್ರವನ್ನು ಹೊದಿಸುವರು. ಜೀವಬಾಧ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿಬಿಡದೆ, ಅವನು ನನ್ನವನೆಂದು ನನ್ನ ತಂದೆಯ ಮುಂದೆಯೂ ಆತನ ದೂತರ ಮುಂದೆಯೂ ಒಪ್ಪುವೆನು" (ಪ್ರಕ:3:5). "ಯಾವನು ಜಯ ಹೊಂದುತ್ತಾನೋ ಅವನನ್ನು ನನ್ನ ದೇವರ ಆಲಯದಲ್ಲಿ ಸ್ತಂಭವಾಗಿ ನಿಲ್ಲಿಸುವೆನು. ಅವನು ಇನ್ನು ಮುಂದೆ ಅದರೊಳಗಿಂದ ಹೋಗುವುದೇ ಇಲ್ಲ." (ಪ್ರಕ: 3:5) "ಜಯಹೊಂದುವ ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು" (ಪ್ರಕ: 3:21).

ಆತನ ಹೃದಯ ಮಾತ್ರವಲ್ಲ, ಆತನ ಹಣವೂ ಸಹಾ ದೇವರಿಗೆ ಪ್ರತಿಷ್ಠಿಸಲ್ಪಟ್ಟಿದೆ ಎಂಬುದನ್ನು ಇಲ್ಲಿ ತೆರೆದಿರುವ ಹಣದ ಚೀಲವು ಸೂಚಿಸುತ್ತದೆ. ತನ್ನ ಲೌಕಿಕ ವಸ್ತುಗಳನ್ನು ವ್ಯರ್ಥವಾಗಿ ಹಾಳುಮಾಡುವುದರ ಬದಲು, ಆತನು, ಬಡವರಿಗೆ ಸಹಾಯ ಮಾಡುತ್ತಾ, ದೇವರಿಗೆ ಕಾಣಿಕೆಗಳನ್ನೂ, ತನ್ನ ಸಂಪಾದನೆಯ ಹತ್ತರಲ್ಲೊಂದು ಪಾಲನ್ನೂ ಅರ್ಪಿಸುತ್ತಾ ತನಗಿರುವ ಸರ್ವಸ್ವವನ್ನು ದೇವರಿಗಾಗಿ ಉಪಯೋಗಿಸುತ್ತಾ ತನ್ನ ಸರ್ವಸ್ವವನ್ನು ಆತನಿಗೆ ಸಮರ್ಪಿಸುತ್ತಾನೆ.

ಈಗ ಆತನು ಪರಿಶುದ್ಧವಾದ, ಹಾಗೂ ದಯೆಯಿಂದ ಕೂಡಿದ ಜೀವಿತವನ್ನು ನಡೆಸುತ್ತಿದ್ದಾನೆಂದು ಚಿತ್ರದಲ್ಲಿರುವ ರೊಟ್ಟಿ ಮತ್ತು ಮೀನು ಸೂಚಿಸುತ್ತವೆ. ಅಮಲು ಪದಾರ್ಥಗಳನ್ನಾಗಲೀ, ರಕ್ತವನ್ನಾಗಲೀ, ಕುತ್ತಿಗೆ ಹಿಸುಕಿ ಕೊಂದದ್ದನ್ನಾಗಲೀ ಇನ್ನಾವ ತರದ ಅಶುದ್ಧ ಪದಾರ್ಥವನ್ನಾಗಲೀ ಆತನು ಸೇವಿಸಿ ತನ್ನನ್ನು ಮಲಿನ ಮಾಡಿಕೊಳ್ಳುವುದಿಲ್ಲ. ಈಗ ಆತನು ತನ್ನ ಹಣವನ್ನು ವ್ಯರ್ಥ ಮಾಡುವುದಿಲ್ಲ. ತಂಬಾಕು ಸೇವನೆ, ಧೂಮಪಾನ ಇನ್ನಿತರ ಹಾನಿಕಾರಕವಾದ ಮಾದಕ ಪದಾರ್ಥಗಳ ಸೇವನೆಯಿಂದ ದೇವರ ಮಂದಿರವಾದ ತನ್ನ ದೇಹವನ್ನು ಅಶುದ್ಧ ಮಾಡಿಕೊಳ್ಳುವುದಿಲ್ಲ. ತನ್ನ ದೇಹಕ್ಕೆ ಅಗತ್ಯವಾದ, ಯೋಗ್ಯವಾದ, ಶುದ್ಧವಾದ ಆಹಾರವನ್ನು ಆತನು ಈಗ ಸೇವಿಸುತ್ತಾನೆ. ಆತನ ಹೃದಯವು ಒಂದು ಪ್ರಾರ್ಥನಾಮಂದಿರವಾಗಿದೆ. ತನ್ನ ಪರಿಸ್ಥಿತಿಯು ಹೇಗೆ ಬೇಕಾದರೂ ಇರಲಿ, ಹವೆಯು ಅನುಕೂಲವಿರಲಿ, ಇಲ್ಲದಿರಲಿ, ಆತನೀಗ ಕ್ರಮ

Copyright ANGP

ವಾಗಿ, ಭಯಭಕ್ತಿಯಿಂದ ದೇವಾರಾಧನೆಗೆ ತಪ್ಪದೇ ಹೋಗುತ್ತಾನೆ. ಪ್ರಾರ್ಥನಾಮಂದಿರ ದಲ್ಲೇ ಆಗಲಿ, ತನ್ನ ಕುಟುಂಬದ ಮಧ್ಯದಲ್ಲಿ ಇಲ್ಲವೇ ತನ್ನ ಏಕಾಂತವಾದ ಕೋಣೆ ಯಲ್ಲೇ ಆಗಲಿ, ಎಲ್ಲಿ ನಡೆದರೂ ಪ್ರಾರ್ಥನೆಯನ್ನು ಅವನು ಈಗ ಬಹಳ ಪ್ರೀತಿಸು ತ್ತಾನೆ. ಏಕೆಂದರೆ, ಪ್ರಾರ್ಥನೆಯ ಮೂಲಕ ದೇವರ ಅನ್ಯೋನ್ಯತೆಯು ಇಲ್ಲವಾದರೆ, ಆ ಕ್ರೈಸ್ತನು ಬಾಳಲಾರನು ಎಂದು ಆತನು ತಿಳಿದಿರುವನು.

ಆತನು, ಪ್ರತೀದಿನ ದೇವರ ವಾಕ್ಯವನ್ನು ಓದಿ ಧ್ಯಾನಿಸುತ್ತಾ ಅದರಿಂದ ಜ್ಞಾನ, ಬಲ, ಜೀವ, ಬೆಳಕು ಮಾತ್ರವಲ್ಲದೆ, ವಿವರಿಸಲಶಕ್ಯವಾದ ಐಶ್ವರ್ಯವನ್ನು ಪಡಕೊಳ್ಳು ತ್ತಾನೆ. ಆದುದರಿಂದ ದೇವರ ವಾಕ್ಯವು ಆತನಿಗೆ ಒಂದು ತೆರೆದ ಪುಸ್ತಕವಾಗಿದೆ ಎಂಬು ದನ್ನು ತೆರೆದ ಪುಸ್ತಕವು ಸೂಚಿಸುತ್ತದೆ. ಅದು ಆತನ ಕಾಲಿಗೆ ದೀಪವೂ ವೈರಿಯನ್ನು ಜಯಿಸುವ ಇಬ್ಬಾಯಿ ಕತ್ತಿಯೂ ಆಗಿದೆ. ಅದು ಆತನ ಆತ್ಮದ ದೈನಿಕ ಆಹಾರವೂ, ದಾಹವನ್ನಡಗಿಸುವ ನೀರೂ, ಆತನನ್ನು ಶುದ್ಧಗೊಳಿಸುವ ಸ್ನಾನವೂ, ತನ್ನ ನಿಜ ಸ್ಥಿತಿ ಯನ್ನು ಆತನಿಗೆ ತೋರಿಸಿ ಕೊಡುವ ದರ್ಪಣವೂ ಆಗಿದೆ ಎಂದು ತಿಳಿದುಕೊಂಡಿರು ತ್ತಾನೆ.

ಕ್ರೂಜೆಯ ಮೂಲಕವಲ್ಲದೆ, ಯಾವ ಕಿರೀಟವೂ ದೊರೆಯುವದಿಲ್ಲವೆಂದು ಆತನು ತಿಳಿದಿರುವುದರಿಂದ ಆತನು ಕ್ರೂಜೆಯನ್ನು ಹೊರಲು ಸಂತೋಷಪಡುತ್ತಾನೆ. ತಾನು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟು, ಹೊಸ ಸೃಷ್ಟಿಯಾಗಿದ್ದೇನೆಂದು ಆತನು ಅರಿತಿರುವುದ ರಿಂದ ಆತನು ಮೇಲಿನ ವಿಷಯಗಳನ್ನು ಅಂದರೆ, ಕಣ್ಣಿಗೆ ಕಾಣದ, ನಿತ್ಯತ್ವದ ವಿಷಯ ಗಳನ್ನು ಈಗ ಹುಡುಕುತ್ತಾನೆ. ಆತನು ಈಗ ದೇವರನ್ನು ಎದುರುಗೊಳ್ಳಲು ಸಿದ್ಧನಾಗಿ ದ್ದಾನೆ. ಆತನು ನೀರಿನ ಬಳಿಯಲ್ಲಿ ನೆಟ್ಟ ವೃಕ್ಷದಂತೆ ಇದ್ದಾನೆ. ಅದು ತಕ್ಕ ಕಾಲದಲ್ಲಿ ಫಲಕೊಡುತ್ತದೆ. 'ನಿಜವಾದ ದ್ರಾಕ್ಷೇ ಬಳ್ಳಿಯ' ಕೊಂಬೆಯಂತೆ ಹೆಚ್ಚು ಫಲಗಳನ್ನು ಫಲಿಸುತ್ತಿದ್ದಾನೆ. ಪವಿತ್ರಾತ್ಮನ ಮೂಲಕ ಆತನು ಹೊಂದಿದ ದೇವರ ಪರಿಪೂರ್ಣವಾದ ಪ್ರೀತಿಯು ಆತನ ಹೃದಯವನ್ನು ತುಂಬಿದೆ.

**ಹತ್ತನೆಯ ಚಿತ್ರವು**

"ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ. ನನ್ನನ್ನು ನಂಬುವವನು ಸತ್ತರೂ ಬದುಕುವನು. ಮತ್ತು ಬದುಕುತ್ತಾ ನನ್ನನ್ನು ನಂಬುವವನು ಎಂದಿಗೂ ಸಾಯುವುದಿಲ್ಲ" (ಯೋಹಾನ: 11:25-26) ಎಂದು ಯೇಸುಕ್ರಿಸ್ತನು ಹೇಳಿದ್ದಾನೆ. "ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು ನಿತ್ಯಜೀವವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವುದಿಲ್ಲ. ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ" (ಯೋಹಾನ. 5:36). ನಿಜಕ್ರೈಸ್ತನಿಗೆ ಮರಣದ ನಂತರ ಭಯವಾಗಲೀ ಯಾತನೆ ಯಾಗಲೀ ಇರುವುದಿಲ್ಲ. "ಮರಣವು ನುಂಗಿಯೇ ಹೋಯಿತು. ಮರಣವೇ ನಿನ್ನ

Copyright ANCP

ಜಯವೆಲ್ಲಿ? ಮರಣವೇ ನಿನ್ನ ವಿಷದ ಕೊಂಡಿ ಎಲ್ಲಿ?......ಆದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟ ದೇವರಿಗೆ ಸ್ತೋತ್ರವಾಗಲಿ" (1 ಕೊರಿಂತ್ಯ: 15:54-57).




**ನೀತಿವಂತನ ಪ್ರಭಾವಯುಕ್ತವಾದ ಅಂತ್ಯ**

ದೇವರೊಂದಿಗೆ ಅನ್ಯೋನ್ಯವಾಗಿ ನಡೆದಾಡುತ್ತಾ ಜೀವಿಸಿದ ಮನುಷ್ಯನಿಗೆ ಮರಣದ ಭಯವಿರುವುದಿಲ್ಲ. ಅಪೋಸ್ತಲನಾದ ಪೌಲನು ಹೇಳುವಂತೆ" ಇಲ್ಲಿಂದ ಹೋಗಿ

ಬಿಟ್ಟು ಕ್ರಿಸ್ತನ ಜೊತೆಯಲ್ಲಿರಬೇಕೆಂಬುದೇ ನನ್ನ ಅಭಿಲಾಷೆ, ಅದು ಉತ್ತಮೋತ್ತಮ" (ಫಿಲಿಪ್ಪಿ: 1:12) ಎಂದು ಈತನು ಸಹಾ ಹೇಳುತ್ತಾ, ತಾನು ಹೊರಟು ಹೋಗ ಬೇಕಾದ ಸಮಯವು ಬಂದಾಗ, ಸಂತೋಷ, ಸಮಾಧಾನದಿಂದ ಗತಿಸಿ ಹೋಗುತ್ತಾನೆ.

ತನಗೋಸ್ಕರ ಶಿಲುಬೆಯಲ್ಲಿ ಸತ್ತು ತನ್ನನ್ನು ಬಿಡುಗಡೆಗೊಳಿಸಿದ ಯೇಸುಕ್ರಿಸ್ತನ ಮುಖವನ್ನು ನೋಡಲು ಸತ್ಕ್ರೈಸ್ತನು ಬಹಳ ಆಶೆಯಿಂದ ಎದುರುನೋಡುತ್ತಿರು ತ್ತಾನೆ. ಪವಿತ್ರಾತ್ಮನು ಸಹಾ "ನಿಮ್ಮ ಹೃದಯವು ಕಳವಳಗೊಳ್ಳದಿರಲಿ. ದೇವರನ್ನು ನಂಬಿರಿ. ನನ್ನನ್ನೂ ನಂಬಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ......ನಾನು ತಿರುಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿ ಕೊಳ್ಳುವೆನು. ಯಾಕಂದರೆ ನಾನು ಇರುವಲ್ಲಿ ನೀವು ಸಹಾ ಇರಬೇಕು" (ಯೋಹಾನ: 14:1-4) ಎಂದು ಯೇಸು ಸ್ವಾಮಿಯು ಹೇಳಿದ ಮಾತುಗಳನ್ನು ಆತನ ಜ್ಞಾಪಕಕ್ಕೆ ತರುತ್ತಾನೆ. "ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧ ಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ" (1 ಕೊರಿಂತ್ಯ 2:9). ತಮ್ಮ ಭೂಲೋಕ ಪ್ರಯಾಣದಲ್ಲಿ ಪ್ರಭುವಾದ ಯೇಸುಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆದಾಡುವ ಮನುಷ್ಯರಿಗೆ ಸಿದ್ಧಮಾಡಲ್ಪಟ್ಟ ಪರ ಲೋಕದ ಮಹಿಮೆಯನ್ನು ವಿವರಿಸಲು ಮಾತುಗಳು ಸಾಕಾಗಲಾರವು.

Copyright ANGP

ಭಯಂಕರವಾದ ಅಸ್ಥಿಪಂಜರದ (ಮೃತ್ಯುವಿನ) ಬದಲಾಗಿ, ದೇವರ ಬಳಿಯಿಂದ ಬಂದ ಒಬ್ಬ ದೇವ ದೂತನನ್ನು ಈ ಕೊನೆಯ ಚಿತ್ರದಲ್ಲಿ ನೋಡುತ್ತೇವೆ. ನೀತಿವಂತ ನೆಂದು ನಿರ್ಣಯಿಸಲ್ಪಟ್ಟಿರುವ ಈತನ ಆತ್ಮವನ್ನು ದೇವರ ಬಳಿಗೆ ಹಿಂದಕ್ಕೆ ತೆಗೆದು ಕೊಂಡು ಹೋಗಲು ಆತನು ಕಾದುಕೊಂಡಿದ್ದಾನೆ. ಆತನ ಆತ್ಮಪ್ರಾಣಗಳು, ಆತನ ನಶ್ವರ ಶರೀರದ ಬಂಧನದಿಂದ ಬಿಡುಗಡೆ ಹೊಂದುತ್ತವೆ. ಆತನು ಯಾವಾತನಿಗಾಗಿ ಈ ಲೋಕ ದಲ್ಲಿ ಜೀವಿಸಿದನೋ, ಯಾವಾತನನ್ನು ಮನಃಪೂರ್ವಕವಾಗಿ ಪ್ರೀತಿಸಿದನೋ ಆತನ ಎದೆ ಯ ಸಾಮೀಪ್ಯಕ್ಕೆ ಈತನ ಆತ್ಮ ಪ್ರಾಣಗಳು ಏರಿಹೋಗುತ್ತವೆ. ಆತನಿಗೆ ಅಲ್ಲಿ ದೇವರ ಸನ್ನಿಧಿಯಲ್ಲಿ ಭವ್ಯ ಸ್ವಾಗತವು ಕಾದಿರುತ್ತದೆ. ಆತನ ಪ್ರಭುವಾದ ಯೇಸುವು ತಾನೇ "ಭಲಾ ನಂಬಿಗಸ್ತನಾದ ಒಳ್ಳೆ ಆಳು ನೀನು, ನಿನ್ನ ಧಣಿಯ ಸೌಭಾಗ್ಯದಲ್ಲಿ ಸೇರು" (ಮತ್ತಾಯ: 25:21) ಎಂಬ ಆಶೀರ್ವಚನದೊಂದಿಗೆ ಆತನನ್ನು ಸ್ವೀಕರಿಸುವನು. ವೈರಿಗೆ ಆತನ ಮೇಲೆ ಇನ್ನೆಂದಿಗೂ ಅಧಿಕಾರವಿರದು. ಏಕೆಂದರೆ, "ಯೆಹೋವನು ತನ್ನ ಭಕ್ತರ ಮರಣವನ್ನು ಅಲ್ಪವೆಂದೆಣಿಸುವುದಿಲ್ಲ" (ಕೀರ್ತನೆ: 116:15), "ಪರಲೋಕ ದಿಂದ ಒಂದು ಶಬ್ದವು ನನಗೆ ಕೇಳಿಸಿತು ಅದು – ಇಂದಿನಿಂದ ಕರ್ತನ ಭಕ್ತರಾಗಿ ಸಾಯುವವರು ಧನ್ಯರು ಎಂಬುದಾಗಿ ಬರೆ ಎಂದು ನನಗೆ ಹೇಳಿತು. ಅದಕ್ಕೆ ಆತ್ಮನು

ಹೌದು, ಅವರು ಧನ್ಯರೇ. ಅವರ ಕಷ್ಟ ತೀರಿತು. ಅವರಿಗೆ ವಿಶ್ರಾಂತಿಯಾಗುವುದು. ಅವರ ಸುಕೃತ್ಯಗಳು ಅವರೊಡನೆ ಬರುವವು ಎಂದು ಹೇಳುತ್ತಾನೆ" (ಪ್ರಕಟಣೆ: 14:13).

**ಕೊನೆಯ ಎಚ್ಚರಿಕೆ**

ಪ್ರಿಯ ವಾಚಕನೇ, ನಿನ್ನನ್ನು ಪ್ರೀತಿಸಿ "ನನ್ನ ಮಗನೇ (ಮಗಳೇ) ನಿನ್ನ ಹೃದಯವನ್ನು ನನಗೆ ಕೊಡು" (ಜ್ಞಾನೋಕ್ತಿ: 23:26) ಎಂದು ಒತ್ತಾಯಮಾಡುತ್ತಿರುವಾತನಿಗೆ ನಿನ್ನ ಹೃದಯವನ್ನು ಒಪ್ಪಿಸುವಂತೆ ದೇವರು ನಿನಗೆ ಸಹಾಯ ಮಾಡಲಿ. ಬಳಲಿಹೋದ, ನಿರಾಶೆ, ವೇದನೆಗಳಿಂದ ಕೂಡಿದ ನಿನ್ನ ಹೃದಯವನ್ನು ಆತನಿಗೆ ಒಪ್ಪಿಸು. ಆಗ ಆತನು ನಿನ್ನೊಳಗೆ ಒಂದು ಹೊಸ ಹೃದಯವನ್ನೂ ಹೊಸ ಆತ್ಮನನ್ನೂ ದಯಪಾಲಿಸುವನು. "ಎಲ್ಲಕ್ಕಿಂತಲೂ, ವಂಚಕ"ವಾಗಿರುವ ನಿನ್ನ ಹೃದಯವು ನಿನ್ನನ್ನು ವಂಚಿಸದಿರಲಿ. ಏಕೆಂದರೆ "ತನ್ನಲ್ಲೇ ಭರವಸೆಯಿಡುವವನು ಮೂಢನು. ಜ್ಞಾನದಿಂದ ನಡೆಯುವವನು ಉದ್ಧಾರವನ್ನು ಪಡೆಯುವನು" (ಜ್ಞಾನೋಕ್ತಿ: 28:25). ನಿನ್ನ ಪಾಪಗಳನ್ನು ತೊರೆದುಬಿಟ್ಟು ನೀತಿಯನ್ನು ಬಲವಾಗಿ ಹಿಡಿದುಕೋ. ಏಕೆಂದರೆ "ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಯೇಸುಕ್ರಿಸ್ತನಲ್ಲಿರುವ ನಿತ್ಯಜೀವ" (ರೋಮಾ: 6:23).

ನೀನು ಇಷ್ಟರಲ್ಲೇ, ನಿನ್ನ ಜೀವಿತವನ್ನು ದೇವರಿಗೆ ಒಪ್ಪಿಸಿರುವುದಾದರೆ ಕ್ರಿಸ್ತ ನಂಬಿಕೆಯಿಂದಲೂ, ಪ್ರೀತಿಯಿಂದಲೂ ಕೂಡಿದವನಾಗಿ ನಿನಗೆ ಹೇಳಲ್ಪಟ್ಟ ಬುದ್ಧಿ ಮಾತುಗಳನ್ನು ಗಟ್ಟಿಯಾಗಿ ಹಿಡಿದುಕೋ. ಇದೇ ಕಾರಣದಿಂದ ಅಪೋಸ್ತಲನಾದ ಪೌಲನು (2 ತಿಮೊ:1:12ರಲ್ಲಿ) "ನಾನು ನಂಬಿರುವಾತನನ್ನು ಬಲ್ಲೆನು. ಆತನು ನನ್ನ ವಶದಲ್ಲಿಟ್ಟಿರುವುದನ್ನು ಆತನು ಆ ದಿನಕ್ಕಾಗಿ ಕಾಪಾಡುವುದಕ್ಕೆ ಶಕ್ತನಾಗಿದ್ದಾನೆಂದು ದೃಢವಾಗಿ ನಂಬಿದ್ದೇನೆ" ಎಂದು ಹೇಳುತ್ತಾನೆ. ಮಾರ್ಗವೂ, ಸತ್ಯವೂ, ಜೀವವೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು, ಅತಿ ಪರಿಶುದ್ಧವಾದ ನಂಬಿಕೆಯನ್ನು ಆಧಾರ ಮಾಡಿಕೊಂಡು ಭಕ್ತಿಯಲ್ಲಿ ಬೆಳೆಯುತ್ತಾ, ಪವಿತ್ರಾತ್ಮ ಭರಿತರಾಗಿ ಪ್ರಾರ್ಥನೆ ಮಾಡುತ್ತಾ ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ. ಯೇಸುಕ್ರಿಸ್ತನು 'ರಾಜರ ರಾಜನೂ, ಕರ್ತರ ಕರ್ತನೂ' ಆಗಿದ್ದು ತಾನು ಆದುಕೊಂಡ ತನ್ನ ಸ್ವಕೀಯ ಪ್ರಜೆಯನ್ನು ಸ್ವೀಕರಿಸಿಕೊಳ್ಳಲು ಬೇಗನೇ ತಿರಿಗೊಂದಾವರ್ತಿ ಬರುತ್ತಾನೆ.

"ಎಡವಿ ಬೀಳದಂತೆ ನಿಮ್ಮನ್ನು ಕಾಪಾಡುವದಕ್ಕೂ ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವುದಕ್ಕೂ ಶಕ್ತನಾಗಿರುವ ನಮ್ಮ ರಕ್ಷಕನಾದ ಒಬ್ಬನೇ ದೇವರಿಗೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ಪ್ರಭಾವ, ಮಹತ್ವ, ಆಧಿಪತ್ಯ, ಅಧಿಕಾರಗಳು ಈಗಲೂ ಯಾವಾಗಲೂ ಇರಲಿ, ಆಮೆನ್" (ಯೂದನು: 24, 25).

Copyright ANGP

1. ದಿವ್ಯ ಮಹಿಮಾ ಲೋಕವದೆ, ಅಲ್ಲಿ ನಿಂದಿರ್ಪ ಕಾಯುತ್ತೆಮ್ಮ
ಪರಲೋಕದ ದಿವ್ಯ ತಂದೆ, ಎದುರ್ಗೊಳ್ಳಲು ಆಶಿಸುತ್ತಾ.
:।: ಮಹಿಮಾ......ಲೋಕವು,
ಎಷ್ಟೋ ರಮ್ಯವೆಂದು ಬಲ್ಲೆನು :।
2. ಕಷ್ಟ ದುಃಖಗಳಲ್ಲಿರವು, ಸರ್ವಕಾಲದಿ ಸಂತಸದಿ,
ಭಕ್ತಮಂಡಳಿ ಹರ್ಷಿಪದು, ದಿವ್ಯ ಭಾಗ್ಯದಿ ನಿತ್ಯದಲಿ.

* * *

ಪ್ರಿಯ ವಾಚಕನೇ, ಒಂದು ನಿರ್ಧಾರಕ್ಕೆ ಬರಲು ಇದೇ ಸುಸಮಯ. ನಿಮ್ಮ ಇಚ್ಛಾನುಸಾರವಾಗಿ ಆರಿಸಿಕೊಳ್ಳಿರಿ. ಉಚಿತಾರ್ಥ ವರವಾದ ನಿತ್ಯಜೀವವನ್ನೋ ಅಥವಾ ಬೆಂಕಿಯ ಕೆರೆಯ ಸಂಕಟವನ್ನೋ. ನೀವು ಯಾವುದನ್ನು ಆರಿಸಿಕೊಳ್ಳುವಿರಿ?

ಈ ಪುಸ್ತಕದ ಸಂದೇಶವನ್ನು ಓದಿದ ಪರಿಣಾಮವಾಗಿ ನೀವು ಪ್ರಭುವಾದ, ಯೇಸುಕ್ರಿಸ್ತನನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದರೆ, ದಯವಿಟ್ಟು ಈ ಕೆಳಗಿನ ನಿರ್ಧಾರವನ್ನು ಒಂದು ಕಾಗದದಲ್ಲಿ ಬರೆದು ನಮಗೆ ಕಳುಹಿಸಿಕೊಡಿರಿ. ನಿಮ್ಮ ಸಂತೋಷದಲ್ಲಿ ನಾವೂ ಭಾಗಿಗಳಾಗಿ ನಿಮಗಾಗಿ ಪ್ರಾರ್ಥಿಸಲು ಇಚ್ಛಿಸುತ್ತೇವೆ.

## ನಿರ್ಧಾರ

"ಪ್ರಭುವಾದ ಯೇಸುಕ್ರಿಸ್ತನು ನನಗಾಗಿ ಕ್ರೂಜೆಯ ಮೇಲೆ ಸತ್ತು ನನಗಾಗಿ ತನ್ನ ರಕ್ತವನ್ನು ಚೆಲ್ಲಿದನೆಂದು ನಂಬಿ, ನನ್ನ ಪಾಪಗಳನ್ನು ಆತನಿಗೆ ಅರಿಕೆ ಮಾಡಿಕೊಂಡು, ಆತನನ್ನು ನನ್ನ ಸ್ವಂತ ರಕ್ಷಕನನ್ನಾಗಿ ಸಂತೋಷದಿಂದ ಅಂಗೀಕರಿಸುತ್ತೇನೆ."

* * *

'ಮಾನವನ ಹೃದಯ' ಎಂಬ ಅತೀ ಸಹಾಯಕವಾದ ಈ ಚಿಕ್ಕ ಪುಸ್ತಕವನ್ನು ಪ್ರಾರ್ಥನಾಪೂರ್ವಕವಾಗಿ ಹಂಚುವ ಕಾರ್ಯದಲ್ಲಿ ನೀನು ಸಹಕರಿಸುವಿಯೋ?

ಹೆಚ್ಚಿನ ಪ್ರತಿಗಳು ಈ ಕೆಳಗಿನ ವಿಳಾಸದಲ್ಲಿ ದೊರೆಯುತ್ತವೆ:

* * *

ನಮ್ಮಲ್ಲಿ ಅನೇಕ ವಿಜಾತಿಯ ಸುವಾರ್ತಾ ಕರಪತ್ರಗಳು ಉಚಿತವಾಗಿ ದೊರೆಯುತ್ತವೆ. ನಮೂನೆ ಪ್ರತಿಗಳಿಗೆ ಟಪ್ಪಾಲು ಖರ್ಚು ಕಳುಹಿಸಿರಿ.

Copyright ANCP

## A SPECIAL WORD FROM ANGP
## UN MONDE SPÉCIAL DE L'ANGP
## UMA PALAVRA ESPECIAL DA ANGP

This booklet "The Heart of Man" is available in over 538 languages and dialects spoken throughout the world (Africa, Asia, The Far East, South America, Europe, etc.) Our Heart Book is now also available on cell phones, tablets, etc from www.angp-hb.co.za or as an APP "Heart of Man" on Android phones.

Le livre du "Coeur de l'homme" peut etre obtenu en plus de 538 langues et dialectes parles dans le monde entier, a savoir: Afrique, Amerique, Asie, Extreme Orient, Europe. Notre Livre du Coeur est maintenant aussi disponible sur votre Telephone cellular, plaques, etc. de www.angp-hb.co.za ou comme une Application "Heart of Man" sur telephones Android.

Este livro "O Coracao do Homem" e obtído em mais de 538 linguas e dialectos falados em todo o mundo, a saber: (Africa, Asia, America do Sul, Extremo Oriente, Europa, etc). O nosso Livro O Coração do Homem tambem esta agora disponivel em telefone celular, tablets, etc. de www.angp-hb.co.za ou como um aplicativo "Heart of Man" nos telephones celulares Android.

Copyright ANGP

The 10 heart pictures contained in this booklet are also available in the form of large coloured picture charts (86 x 61cm) bound together in a set of 10 pictures. These "Heart Charts" can be obtained with European or African features and are particularly suitable to be used in conjunction with the Heart Book for class-teaching, open air evangelization etc. Kindly contact us to ascertain the latest subsidized price of this chart.

Les 10 images du coeur qui figurent dans ce livre peuvent etre obtenues en tableaux de couleur, format 86 x 61 cm, avec des physionomies europeennes ou africaines. Ils peuvent etre utilises en meme temps que le livre du coeur pour des classes bibliques, a

l'ecole du dimanche ou lors de reunions de plein air. Soyez aimable de nous contacter pour assurer les derniers prix en cours du tableau.

As 10 imagens do coracao, contidas neste livro podem ser obtidas num conjunto de 10 imagens em colorido no tamanho de (86 x 61 cm). Estes "Cartazes do Coracao podem ser obtfdos com caracterfsticas Europeias e Africanas e podem ser usados em conjuncao com o mesmo livro em classes de ensino biblico, evangelizacao ou ao ar livre. Agradeciamos que nos contacta- se para confirmacao do ultimo preco dos cartazes.



Kindly write to us if you are able to assist us with further translations of our free Gospel literature, informing us of the language into which you could translate this Gospel literature. Your assistance would be appreciated.

Copyright ANGP

If you have found salvation in Christ, or have been otherwise blessed through our Gospel literature, please let us know. We would like to thank God with you, and remember you further in our prayers.

Nous vous invitons a nous contacter pour faire des arrangements concernant de nouvelles traductions de notre litterature, nous informant de la langue dans laquelle vous pouvez traduire cette litterature evangelique. Votre aide sera beaucoup appreciee.

Si vous avez trouve le salut en Christ ou si vous avez ete beni par notre litterature, nous vous prions de nous le faire savoir. Nous aimerions remercier Dieu avec vous et prier pour vous.

Nos vos convidamos a nos contactar, afim de fazer qualquer arranjo concernente a novas traducoes de nossa literatura em outras Ifnguas. Vossa assistencia sera muito apreciavel.

Se tem encontrado a salvacao em Cristo, ou se tem sido abencoado por intermedio da nossa literatura evangelica, faca o favor de nos

informar. Pois nos gostarfamos de agradecer a Deus juntamente convosco, e lembra-lo sempre em nossas oracoes.

For free Gospel literature, books and tracts in over 538 languages, write to:

Pour obtenir gratuitement de la litterature evangelique, des livres et des traites en plus de 538 langues, ecrivez a:

Para obter gratuftamente a literatura evangelica, livros e folhetos em mais de 538 lfnguas diferentes escreva para:

E-MAIL: info@angp-hb.co.za
info@angp.co.za

**ALL NATIONS GOSPEL PUBLISHERS**
**P.O. Box 2191**
**PRETORIA**
**0001**
**R.S.A.**

Copyright ANGP

A Gospel Literature Mission financed by donations
Une Mission de litterature evangelique financee de dons
Missao de literatura Evanqelica financiada por donativos

(Reg. No. 1961/001798/08)